MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com  Yuva Marga  yuva_marga_

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 115 | ಶನಿವಾರ : 21-02-2026 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 115 | SATURDAY : 21-02-2026 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

ಜಿಲ್ಲಾಡಳಿತದಿಂದ ಸರ್ವಜ್ಞ ಜಯಂತಿ ಆಚರಣೆ

## ಸಂತಕವಿ ಸರ್ವಜ್ಞ ಕನ್ನಡ ನಾಡಿನ ಸಂಪತ್ತು: ವೈ ಸುರೇಂದ್ರಬಾಬು ಕುಂಬಾರ



ಯುವಮಾರ್ಗ ಸುದ್ದಿ

**ರಾಯಚೂರು,ಫೆ.20–** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಫೆ.20ರಂದು ಸಂತ ಕವಿ ಸರ್ವಜ್ಞ ಜಯಂತಿ ಆಚರಿಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ ವೃತ್ತದಲ್ಲಿ ಸಂತಕವಿ ಸರ್ವಜ್ಞ ಅವರ ಭಾವಚಿತ್ರದ ಮೆರವಣಿಗೆಗೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಚಾಲನೆ ನೀಡಿದರು. ಅಲ್ಲಿಂದ ಆರಂಭಗೊಂಡ ಮೆರವಣಿಗೆಯು ನಗರದ ಪ್ರಮುಖ ವೃತ್ತಗಳಲ್ಲಿ ಸಂಚರಿಸಿ ಜಿಲ್ಲಾ ರಂಗಮಂದಿರಕ್ಕೆ ಬಂದು ಸೇರಿತು. 2ನೇಪುಟಕ್ಕೆ

## ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಶೋಭಾ ಯಾತ್ರೆ ಮೇಲೆ ಕಲ್ಲು ತೂರಿದ ಪ್ರಕರಣ : 8 ಮಂದಿ ವಶಕ್ಕೆ

**ಬೆಂಗಳೂರು,ಫೆ.20–** ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಅಂಗವಾಗಿ ನಡೆಯುತ್ತಿದ್ದ ಶೋಭಾ ಯಾತ್ರೆಯ ಮೇಲೆ ಕಲ್ಲು ತೂರಿದ್ದ ಘಟನೆಗೆ ಸಂಬಂಧಪಟ್ಟಂತೆ ತಂಜೀರ್ ಸೇರಿದಂತೆ ಎಂಟು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸದ್ಯಕ್ಕೆ ಪರಿಸ್ಥಿತಿ ಶಾಂತವಾಗಿದೆ. ಬಂಧಿತರನ್ನು ತಂಜೀರ್ (28) , ಮುಜ್ಜು (23), ಸದ್ದಾಂ(22), ಫ'ಂಯಾಜ್(24), ಸರ್ಫರಾಜ್(33), ರಿಯಾನ್(21), ಅಯಾನ್(19), ವಸೀಮ್?(22) ಎಂದು ಗುರುತಿಸಲಾಗಿದೆ.

ಬಾಗಲಕೋಟೆಯ ನವನಗರದ ವಿದ್ಯಾಗಿರಿಯಲ್ಲಿ ಶಿವಾಜಿ ಜಯಂತ್ಯೋತ್ಸವದ ಅಂಗವಾಗಿ ಶೋಭಾ ಯಾತ್ರೆ ಆಯೋಜಿಸಲಾಗಿತ್ತು. ರಂಜಾನ್ ಉಪವಾಸ ಆರಂಭದ ದಿನಗಳಾಗಿರು ವುದರಿಂದ ಮಸೀದಿಯಲ್ಲಿ ಪ್ರಾರ್ಥನೆ ಮುಗಿದ ಬಳಿಕವೇ ಮೆರವಣಿಗೆಗೆ ಸಮಯ ನೀಡಲಾಗಿತ್ತು. ರಾತ್ರಿ 9.30ರ ಬಳಿಕ ಶಿವಾಜಿ ಭಾವಚಿತ್ರವನ್ನು ಒಳಗೊಂಡ ಶೋಭಾಯಾತ್ರೆ ಡಿಜೆಯೊಂದಿಗೆ ನಡೆಯುತ್ತಿತ್ತು. ಕಿಲ್ಲಾಗಲ್ಲಿಯ ಪಂಕಾ ಮಸೀದಿಯಿಂದ ರಾತ್ರಿ 10.06 ಗಂಟೆಗೆ ಸರಿಯಾಗಿ ಮೆರವಣಿಗೆಯ ಮೇಲೆ ಕಲ್ಲು



ತೂರಾಟ ನಡೆದಿದೆ. ಶೋಭಾಯಾತ್ರೆ ಇನ್ನೂ ಹಿಂದೆ ಇದ್ದಿದ್ದರಿಂದ ಭದ್ರತೆಗೆ ನಿಯೋಜಿಸಿದ್ದ ಪೊಲೀಸರೆಡೆಗೆ ಕಲ್ಲು ಹಾಗೂ ಪಾದರಕ್ಷೆಗಳನ್ನು ತೂರಿದ್ದಾರೆ. ಎಸ್‌ಪಿ ಸಿದ್ದಾರ್ಥ ಗೋಯಲ್ ಅವರ ಭುಜಕ್ಕೆ ಕಲ್ಲು ತಾಗಿದೆ. ಕೆಲ ಸಿಬ್ಬಂದಿಗಳಿಗೆ ಗಾಯಗಳಾಗಿವೆ. ಪೊಲೀಸರು ಶಾಂತರೀತಿಯಿಂದ ವರ್ತಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದಾರೆ. ಹಿಂದೂ ಸಂಘಟನೆಗಳ ಮುಖಂಡರು ಪ್ರತಿಭಟನೆಗೆ ಮುಂದಾಗಿದ್ದಾರೆ. ಪೊಲೀಸರು ಮನವೊಲಿಸಿದ್ದಾರೆ. ಮಸೀದಿಯ ಮುಖಂಡರು ಮುಂದೆ ನಿಂತು ಮೆರವಣಿಗೆಗೆ ಮುಂದೆ ಸಹಕರಿಸಿದ್ದಾರೆ. (2ನೇ ಪುಟಕ್ಕೆ)

## ಕಲ್ಲು ತೂರಿದವರ ವಿರುದ್ಧ ಕಠಿಣ ಕ್ರಮ: ಸಿಎಂ

**ಬೆಂಗಳೂರು, ಫೆ.20–** ನಾಡಿನ ಶಾಂತಿ–ನೆಮ್ಮದಿ ಭಂಗ ತರುವ ಯಾವುದೇ ಶಕ್ತಿಗಳನ್ನು ಸರ್ಕಾರ ಸಹಿಸುವುದಿಲ್ಲ. ಬಾಗಲಕೋಟೆಯಲ್ಲಿ ಕಲ್ಲು ತೂರಾಟ ನಡೆಸಿದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ.

ತಮ ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಸಂದೇಶ ರವಾನಿಸಿರುವ ಅವರು, ಬಾಗಲಕೋಟೆಯಲ್ಲಿ ನಡೆದ ಕಲ್ಲು ತೂರಾಟ ಘಟನೆಯು ಸಮಾಜದ ಶಾಂತಿ, ಸೌಹಾರ್ದತೆಗೆ ಮಾರಕ. ಇದನ್ನು ನಾನು ಮತ್ತು ನಮ ಸರ್ಕಾರ ಬಲವಾಗಿ ಖಂಡಿಸುತ್ತೇವೆ ಎಂದಿದ್ದಾರೆ. (2ನೇ ಪುಟಕ್ಕೆ)

## ತ್ರಿಪದಿ ಕವಿ ಸರ್ವಜ್ಞ ಜಯಂತಿ



ಯುವಮಾರ್ಗ ಸುದ್ದಿ

**ಮಾನ್ವಿ,ಫೆ.20–**ಪಟ್ಟಣದ ತಹಶಿಲ್ದಾರ್ ಕಚೇರಿಯಲ್ಲಿ ತ್ರಿಪದಿ ಕವಿ ಸರ್ವಜ್ಞ ಜಯಂತಿ ಅಂಗವಾಗಿ ತ್ರಿಪದಿ ಕವಿ ಸರ್ವಜ್ಞ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಗ್ರೇಡ್–2 ತಹಸೀಲ್ದಾರ್ ಅಬ್ದುಲ್ ವಾಹಿದ್ ಮಾತನಾಡಿ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮ ಮೂರು ಸಾಲುಗಳ ತ್ರಿಪದಿಗಳ ಮೂಲಕ ಸಮಾಜವನ್ನು ತಿದ್ದುವ ಮೂಲಕ ಸರ್ವಜ್ಞ ಕವಿ ವಿಶೇಷ್ಟವಾದ ಸ್ಥಾನವನ್ನು ಪಡೆದಿದ್ದಾರೆ. ಸರ್ವಜ್ಞನ ತ್ರಿಪದಿಗಳು ಕನ್ನಡದಲ್ಲಿದ್ದು ಅತ್ಯಂತ ಸರಳವಾಗಿವೆ ಹಾಗೂ ಸಮಾಜದಲ್ಲಿನ ಅನೇಕ ಕಂದಾಚರಗಳನ್ನು ,ಮೌಡ್ಯಾಚರಣೆಗಳನ್ನು ತಮ್ಮ ತ್ರಿಪದಿಗಳ ಮೂಲಕ ಖಂಡಿಸಿದ್ದಾರೆ. ಅವರ ವಚನಗಳು ಇಂದಿಗೂ ಕೂಡ ಪ್ರಸ್ತುತವಾಗಿವೆ ಎಂದು ತಿಳಿಸಿದರು.

ತ್ರಿಪದಿ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಉಪತಹಶೀಲ್ದಾರ್ ವಿರುಪ್ಪಣ್ಣ, ಕಂದಾಯ ಇಲಾಖೆ ಸಿಬ್ಬಂದಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಕುಂಬಾರ್ ಸಮಾಜದ ತಾ.ಅಧ್ಯಕ್ಷರಾದ ಕೆ,ಮಲ್ಲೇಶ ಕುಂಬಾರ್ ಬಸವರಾಜಪ್ಪ ಕುಂಬಾರ, ಪಂಪ್ಪಣ್ಣ ಕುಂಬಾರ್ ನೀರಾಮಾನ್ವಿ, ರವಿಕುಮಾರ ಕುಂಬಾರ್, ಪ್ರಹ್ಲಾದ್ ಕುಂಬಾರ್,ಶರಣಪ್ಪ ಕುಂಬಾರ್, ಬಸವ ಕುಂಬಾರ್, ಪ್ರಕಾಶ ಕುಂಬಾರ್, ಡಾ.ಮಲ್ಲಿಕಾರ್ಜುನ ಕುಂಬಾರ್ ', ಅರಳಪ್ಪ ಕುಂಬಾರ್, ಮಲ್ಲಪ್ಪ ಕುಂಬಾರ್ ಬಸವರಾಜ ಕುಂಬಾರ್ ನೀರಮಾನ್ವಿ. ಸಿದ್ದು ಕುಂಬಾರ್, ಉಮೇಶ ಕುಂಬಾರ್ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

## ವಾಲ್ಮೀಕಿ ಶ್ರೀಗಳು ಬೇಗ ಚೇತರಿಸಿಕೊಳ್ಳಲಿ ಎಂದು ನೀರಮಾನ್ವಿ ಯಲ್ಲಮ್ಮ ದೇವಿಗೆ ವಿಶೇಷ ಪೂಜೆ

ಯುವಮಾರ್ಗ ಸುದ್ದಿ

**ಮಾನ್ವಿ,ಫೆ.20–** ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಜಗದ್ಗುರು ಡಾ.ವಾಲ್ಮೀಕಿ ಪ್ರಸನ್ನಾನಂದ ಪುರಿ ಮಹಾಸ್ವಾಮಿಗಳು ಆರೋಗ್ಯದಲ್ಲಿ ಏರುಪೇರು ಅಗಿ ಆಸ್ಪತ್ರೆ ದಾಖಲಾಗಿರುವ

ಶ್ರೀಗಳು ಬೇಗ ಗುಣಮುಖರಾಗಲೇಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ಯುವ ಘಟಕದ ಜಿಲ್ಲಾಧ್ಯಕ್ಷ ಶರಣಬಸವ ನಾಯಕ ಜಾನೇಕಲ್ ನೇತೃತ್ವದಲ್ಲಿ ಶುಕ್ರವಾರ ನೀರಮಾನ್ವಿ ಯಲ್ಲಮ್ಮ ದೇವಿಗೆ ವಿಶೇಷ ಪೂಜೆ ನೇರವೇರಿಸಿದರು.

ಈ ವೇಳೆ ಜಿಲ್ಲಾಧ್ಯಕ್ಷ ಶರಣಬಸವ ನಾಯಕ ಜಾನೇಕಲ್

ಮಾತನಾಡಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಜಗದ್ಗುರು ಡಾ.ವಾಲ್ಮೀಕಿ ಪ್ರಸನ್ನಾನಂದ ಪುರಿ



ಮಹಾಸ್ವಾಮಿಗಳು ಲಘು ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆ ದಾಖಲಾಗಿರುವ ವಿಷಯ ತಿಳಿದು ಮನಸ್ಸಿಗೆ ಬೇಸರ ತಂದಿದೆ. ಶ್ರೀಗಳು ಸಂಪೂರ್ಣ ಗುಣಮುಖರಾಗಿ ಎಂದಿನಂತೆ ಸಮಾಜಮುಖಿ ಚಟುವಟಿಕೆಗಳಲ್ಲಿ ಮತ್ತೆ ಸಕ್ರಿಯರಾಗಲಿ ಎಂದರು.

ಈ ಸಂದರ್ಭಗಳಲ್ಲಿ ಭೀಮಯ್ಯ ನಾಯಕ, ಚನ್ನಬಸವ ನಾಯಕ,ದೇವಸ್ಥಾನದ ಪ್ರಧಾನ ಅರ್ಚಕರಾದ ಪೂಜಾರಿ ಮಲ್ಲಿಕಾರ್ಜುನ, ಗೋಪಾಲ್ ನಾಯಕ್ ನೀರಮಾನವಿ , ಹನುಮೇಶ್ ನಾಯಕ ನೀರಮಾನವಿ ,ಕೃಷ್ಣ ನಾಯಕ ಮದ್ಲಾಪೂರ , ಬಸವ ನೀರಮಾನವಿ, ವೆಂಕಿ ನಾಗಪ್ಪ ನಾಯಕ, ಶೀವು ನಾಯಕ ನೀರಮಾನವಿ ಆಂಜಿನೇಯ್ಯ, ಚಿದಾನಂದ್, ಸುರೇಶ ನಾಯಕ ,ಮಂಜುನಾಥ ನಾಯಕ ತುಪ್ಪದೂರು, ಅಭಿ ನಾಯಕ ತುಪ್ಪದೂರ ,ಮಹೇಶ್ ನಾಯಕ ಉಪಸ್ಥಿತರಿದ್ದರು.

## ಜೋಳ ಖರೀದಿ ಪ್ರಕ್ರಿಯೆಯನ್ನು ಕೂಡಲೇ ಪ್ರಾರಂಭಿಸಿ:ದುರುಗಪ್ಪ ತಡಕಲ್



ಯುವಮಾರ್ಗ ಸುದ್ದಿ

**ಮಾನ್ವಿ,ಫೆ.20–** ಪಟ್ಟಣದ ಪತ್ರಿಕಾ ಭವನದಲ್ಲಿ ರೈತ ಮುಖಂಡ ದುರುಗಪ್ಪ ತಡಕಲ್ ಮಾತನಾಡಿ ರೈತರು ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಜೋಳವನ್ನು ಮಾರಾಟ ಮಾಡುವುದಕ್ಕೆ ಖರೀದಿ ಕೇಂದ್ರಗಳಲ್ಲಿ ನೊಂದಾಯಿಸಿಕೊಂಡು ಒಂದು ತಿಂಗಳು ಕಳೆದಿದ್ದಾರು ಕೂಡ ಇದುವರೆಗೂ ಸರ್ಕಾರ ಖರೀದಿ ಪ್ರಕ್ರೀಯೆ ಪ್ರಾರಂಭಿಸದೆ ಇರುವುದರಿಂದ ರೈತ ಜೀಳ ಕಾಟವು ಮಾಡಿ ಮೂರು ತಿಂಗಳು ಕಳೆದಿದ್ದು ಜೋಳಕ್ಕೆ ನುಸಿ ಬಂದು ಹಾಳಗುವುದರಿಂದ ರೈತ ಬೆಳೆದ ಜೋಳಕ್ಕೆ ಯಾವುದೆ ಬೆಲೆ ದೊರೆಯದೆ ನಷ್ಟ ಉಂಟಾಗುತ್ತದೆ. ಅದ್ದರಿಂದ ಕೂಡಲೇ ತಾಲೂಕಿನ ಎಲ್ಲಾ ಖರೀದಿ ಕೇಂದ್ರಗಳಲ್ಲಿ ಜೋಳ ಖರೀದಿಗೆ ಅಗತ್ಯವಿರುವ ಲಾರಿಗಳ ವ್ಯವಸ್ಥೆ,ಹಮಾಲಿ ವ್ಯವಸ್ಥೆ,ಖಾಲಿ ಚೀಲದ ವ್ಯವಸ್ಥೆ ಮಾಡಿ ಕೂಡಲೆ ಖರೀದಿ ಮಾಡಬೇಕು ಮುಂದಿನ ದಿನಗಳಲ್ಲಿ ಸರ್ಕಾರ ರೈತರು ಜೋಳ ಕಾಟವು ಮಾಡಿದ ಕೂಡಲೇ ಜೋಳ ಖರೀದಿಗೆ ವ್ಯವಸ್ಥೆ ಮಾಡಬೇಕು ಹಾಗೂ ತಾಲೂಕಿನ ಕುರ್ಡಿ ಹೋಬಳಿಯಲ್ಲಿ ಬೆಳೆದಿರುವ ಹತ್ತಿ ಮತ್ತು ತೋಗರಿ ಬೆಳೆಯನ್ನು ಕೂಡ ಬೆಂಬಲ ಬೆಲೆಯಡಿಯಲ್ಲಿ ಖರೀದಿ ಮಾಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಹನುಮೇಶ ಜೀನೂರು, ಅಜೀತ್ ಕುಮಾರ,ಶಿವಕುಮಾರ ತಡಕಲ್, ಮಹಾದೇವ ತಡಕಲ್ ಇದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

9743497111, 9743496111

## ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಸಂಸದ ಜಿ ಕುಮಾರ ನಾಯಕ



ಯುವಮಾರ್ಗ ಸುದ್ದಿ

**ಲಿಂಗಸುಗೂರು.ಫೆ.12–** ತಾಲೂಕಿನ ಚಿತ್ತಾಪುರ ಗ್ರಾಮದಲ್ಲಿ ಕೇಂದ್ರ ಸರಕಾರದ ಮಹತ್ವ ಯೋಜನೆಯಾದ ಜಲಧಾರೆ ಕಾಮಗಾರಿಯನ್ನು ರಾಯಚೂರು ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದ ಜಿ ಕುಮಾರ ನಾಯಕರವರು ಇಂದು ವೀಕ್ಷಣೆ ಮಾಡಿದರು.

ರಾಯಚೂರು ಜಿಲ್ಲೆಯ 860 ಗ್ರಾಮ ಹಾಗೂ 2000 ಲಕ್ಷ ಜನ ವಸತಿಪ್ರದೇಶಗಳಿಗೆ ಸೇರಿದಂತೆ ಮಾನ್ವಿ, ಮಸ್ಕಿ, ಕವಿತಾಳ, ತುರುವಿಹಾಳ, ಬಳಗಾನೂರ, ಸಿರವಾರ ಹಾಗೂ ಹಟ್ಟಿ ಪಟ್ಟಣಕ್ಕೆ ಆಃಔಖಿ ಆಧಾರದ ಮೇಲೆ ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಜಲಜೀವನ್ ಮಿಷನ್ ಯೋಜನೆ ಅಡಿಯಲ್ಲಿ ಓಂಃಂಖಆ ಹಾಗೂ ಗಆಆ ಅನುದಾನದ ಒಟ್ಟು 2200 ಕೋಟಿ ಮೊತ್ತದ ಕಾಮಗಾರಿಯ 2024 ರಲ್ಲಿ ಪೂರ್ಣಗೊಳಬೇಕಾದ ಕಾಮಗಾರಿಯು ಇನ್ನೂ ಪೂರ್ಣಗೊಳ್ಳದೆ ಇರುವುದರಿಂದ ಸಂಸದರು ಅಧಿಕಾರಿಗಳಿಗೆ ಚಳಿ ಬಿಡಿಸಿದರು

ಕಾಮಗಾರಿಯು ಗುಣಮಟ್ಟದ ಜೊತೆಗೆ ಆದಷ್ಟು ಬೇಗನೆ ಪೂರ್ಣಗೊಳಿಸಿ ಎಂದು ಸೂಚಿಸಿದರು

ಈ ಯೋಜನೆಯು ಪೂರ್ಣಗೊಂಡ ನಂತರ ಪ್ರತಿ ದಿನ ಒಂದು ಕೋಟಿ ಅರವತ್ತು ಲಕ್ಷ ಲೀಟರ್ ನೀರನ್ನು ಸರಬರಾಜು ಮಾಡುತ್ತದೆ ಈ ಯೋಜನೆಯಿಂದ ಜಿಲ್ಲೆಯ ಬಹುಭಾಗಗಳಿಗೆ ನೀರಿನ ಸಮಸ್ಯೆಯೂ ಕಡಿಮೆಯಾಗುತ್ತದೆ ಎಂದು ತಿಳಿಸಿದರು ಈ ವೇಳೆ ಜಲಧಾರೆ ಯೋಜನೆಯ ಯೋಜನಾ ವ್ಯವಸ್ಥಾಪಕರು ಹಾಗೂ ಗ್ರಾಮೀಣ ನೀರು ಸರಬರಾಜು ಇಲಾಖೆ ಅಧಿಕಾರಿಗಳು ಸಾರ್ವಜನಿಕರು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು ಹಾಜರಿದ್ದರು...

# ಮೊದಲನೇಯ ಪುಟದಿಂದ

## ಜಿಲ್ಲಾಡಳಿತದಿಂದ ಸರ್ವಜ್ಞ ಜಯಂತಿ ಆಚರಣೆ

## ಸಂತಕವಿ ಸರ್ವಜ್ಞ ಕನ್ನಡ ನಾಡಿನ ಸಂಪತ್ತು: ವೈ ಸುರೇಂದ್ರಬಾಬು ಕುಂಬಾರ

ಡೊಳ್ಳಿನ ಕಲಾ ತಂಡಗಳ ಮೂಲಕ ಮೆರವಣಿಗೆಯು ಅದ್ಧೂರಿಯಾಗಿ ನಡೆಯಿತು. ಮೆರವಣಿಗೆಯಲ್ಲಿ ಮುಖಂಡರಾದ ಕೆ.ಶಾಂತಪ್ಪ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ತಹಸೀಲ್ದಾರ ಸುರೇಶ ವರ್ಮಾ ಸೇರಿದಂತೆ ಸಮಾಜದ ಪ್ರಮುಖರು ಇದ್ದರು.

ಬಳಿಕ ಜಿಲ್ಲಾ ರಂಗಮಂದಿರದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಯರಮರಸ್‌ನ ನಿವೃತ್ತ ಪ್ರಾಂಶುಪಾಲರಾದ ವೈ ಸುರೇಂದ್ರಬಾಬು ಕುಂಬಾರ ಅವರು ವಿಶೇಷ ಉಪನ್ಯಾಸ ನೀಡಿ, 16ನೇ ಶತಮಾನದ ಶ್ರೇಷ್ಠ ಕವಿಗಳಲ್ಲೊಬ್ಬರಾದ ಸರ್ವಜ್ಞ ಅವರು ತ್ರಿಪದಿ ರಚನೆಗಳ ಮೂಲಕ ಅರ್ಥಪೂರ್ಣ ವಚನಗಳನ್ನು ಜನತೆಗೆ ನೀಡಿದ್ದಾರೆ. ಹರಿತವಾದ ತ್ರಿಪದಿಯ ಸಾಲುಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ. ಸರ್ವಜ್ಞ ಅವರು ಕನ್ನಡ ನಾಡಿನ ಸಂಪತ್ತು ಎಂದು ತಿಳಿಸಿದರು.

ಮಹಾನಗರ ಪಾಲಿಕೆಯ ಸಮುದಾಯ ಸಂಘಟನಾಧಿಕಾರಿ ಕೃಷ್ಣ ಕಟ್ಟಿಮನಿ ಅವರು ಮಾತನಾಡಿ, ಸರ್ವಜ್ಞ ಅವರು ಕೇವಲ ಒಂದು ಜಾತಿಗೆ ಸೀಮಿತವಾಗಿಲ್ಲ. ಅವರು ಇಡೀ ಜಗತ್ತಿಗೆ ಉತ್ತಮ ಸಂದೇಶಗಳನ್ನು ನೀಡಿದ ಕವಿಯಾಗಿದ್ದಾರೆ. ಸಮ ಸಮಾಜ ನಿರ್ಮಾಣ ಕುರಿತು ಜನತೆಗೆ ತಮ್ಮ ವಚನಗಳ ಮೂಲಕ ಉತ್ತಮ ಸಂದೇಶ ನೀಡಿದರು. ಸಮಾಜ ಇನ್ನಷ್ಟು ಅಭಿವೃದ್ಧಿಯಾಗಲು ಸಮಾಜದ ಜನರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ಮಾಡಿದರು.

ಸಮಾರಂಭದಲ್ಲಿ ಗ್ರೇಡ್ 2 ತಹಸೀಲ್ದಾರ ಪರಶುರಾಮ, ಸಮಾಜದ ಪ್ರಮುಖರಾದ ಶಿವರಾಜಪ್ಪ, ವೀರಭದ್ರಪ್ಪ, ಬಸವರಾಜ, ಶಿವಪ್ರಕಾಶ, ಭೀಮಪ್ಪ, ಲಕ್ಷ್ಮೀರೆಡ್ಡಿ, ತಿಮ್ಮಪ್ಪ, ಬಸವರಾಜ, ರಮೇಶ, ನರಸಿಂಗಪ್ಪ, ಸಾಯಿಬಾಬಾ ಹಾಗೂ ಇತರರು ಇದ್ದರು.

## ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಶೋಭಾ ಯಾತ್ರೆ ಮೇಲೆ ಕಲ್ಲು ತೂರಿದ ಪ್ರಕರಣ : 8 ಮಂದಿ ವಶಕ್ಕೆ

ಅದರ ಬಳಿಕ ಗಲಭೆಗಳು ಆರಂಭಗೊಂಡಿವೆ. ಕೆಲವರು ರಸ್ತೆ ಬದಿಯಲ್ಲಿದ್ದ ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ. ಇದರಿಂದ ಬಾಗಲಕೋಟೆಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಸಿಸಿಟಿವಿ ಕ್ಯಾಮೆರಾವನ್ನು ಆಧರಿಸಿ ತನಿಖೆ ನಡೆಸಿದ ಪೊಲೀಸರು ತಂಝೀರ್ ಹಾಗೂ ಎಂಟು ಮಂದಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಪರಿಸ್ಥಿತಿ ನಿಯಂತ್ರಣಕ್ಕಾಗಿ ಫೆಬ್ರವರಿ 24ರವರೆಗೂ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಎಸ್‌ಪಿ ಸಿದ್ದಾರ್ಥ ಗೋಯೆಲ್, ಘಟನೆಗೆ ಕೋಮು ಗಲಭೆಯ ವ್ಯಾಖ್ಯಾನ ಮಾಡಬಾರದು. ಬಾಗಲಕೋಟೆಯಲ್ಲಿ ಭಾವೈಕ್ಯತೆ ಇದೆ. ಶೋಭಾಯಾತ್ರೆ ಮುಂದುವರೆಯಲು ಮಸೀದಿ ಮುಖಂಡರೇ ಸಹಕಾರ ನೀಡಿದ್ದಾರೆ. ನಿನ್ನೆ ರಾತ್ರಿ 10.06 ಗಂಟೆಗೆ ಸರಿಯಾಗಿ ಕಿಡಿಗೇಡಿಗಳು ಕಲ್ಲುತೂರಾಟ ಮಾಡಿದ್ದಾರೆ. ಅವರನ್ನು ಬಂಧಿಸಿ ಕ್ರಮ ಕೈಗೊಳ್ಳುತ್ತೇವೆ ಎಂದಿದ್ದಾರೆ.ಪಾದರಕ್ಷೆಗಳನ್ನು ಇಡಲು ಮಸೀದಿಯ ಗೋಡೆ ಅಂಚಿನಲ್ಲಿದ್ದ ಶೂ ರ್ಯಾಕ್‌ಗೆ ಆಸರೆಯಾಗಿ ಎರಡು ಕಲ್ಲುಗಳಿದ್ದವು. ತಂಝೀರ್ ಆ ಕಲ್ಲುಗಳನ್ನೆ? ಮೆರವಣಿಗೆಯತ್ತ ತೂರಿದ್ದಾನೆ. ಅಲ್ಲಿದ್ದ ಚಪ್ಪಲಿಯನ್ನು ಎಸೆದಿದ್ದಾನೆ. ಆತ ತೂರಿದ್ದ ಕಲ್ಲುಗಳು ಶೋಭಾ ಯಾತ್ರೆವರೆಗೂ ತಲುಪಿಲ್ಲ. ಕೆ ಎಸ್ ಆರ್ ಪಿ ಯ ಸಿಬ್ಬಂದಿಗಳು ತಮಗೆ ಬಿದ್ದಿವೆ ಎಂದಿದ್ದಾರೆ.

ಪರಿಸ್ಥಿತಿ ನಿಯಂತ್ರಿಸಲು ಎರಡೂ ಕಡೆಯ ಮುಖಂಡರು ಪೊಲೀಸರಿಗೆ ಸಹಕರಿಸಿದ್ದಾರೆ. ಆರೋಪಿ ತಂಜೀರ್ ಈ ಹಿಂದೆ ಇದೇ ರೀತಿಯ ದುಷ್ಕೃತ್ಯಗಳಲ್ಲಿ ಭಾಗಿಯಾಗಿರುವ ಮಾಹಿತಿಗಳು ಸದ್ಯಕ್ಕಿಲ್ಲ ಎಂದರು.

**ಸಭೆ:** ಘಟನೆ ನಡೆದು 14 ಗಂಟೆಗಳಾದರೂ ಆರೋಪಿಗಳನ್ನು ಬಂಧಿಸಿಲ್ಲ ಎಂದು ಆರೋಪಿಸಿ ಹಿಂದೂ ಸಂಘಟನೆಗಳ ಮುಖಂಡರು ಇಂದು ಕಿಲ್ಲಾಗಲ್ಲಿಯ ಶಿವಭವಾನಿ ಸಭಾಂಗಣದಲ್ಲಿ ಸಭೆ ನಡೆಸಿದರು. ಪರಿಸ್ಥಿತಿ ನಿಯಂತ್ರಿಸಲು ಫೆಬ್ರವರಿ 24ರ ವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ, ಆದರೆ ಪೊಲೀಸರು ಸರಿಯಾಗಿ ಕಾರ್ಯನಿರ್ವಹಿಸಿಲ್ಲ ಎಂದು ಆರೋಪಿಸಿ ನಿಷೇಧಾಜ್ಞೆ ನಡುವೆಯೂ ಸಭೆ ನಡೆಸುವುದಾಗಿ ಹಿಂದೂ ಸಂಘಟನೆಗಳ ಮುಖಂಡರು ಹೇಳಿದ್ದರು.


## ಕಲ್ಲು ತೂರಿದವರ ವಿರುದ್ಧ ಕಠಿಣ ಕ್ರಮ: ಸಿಎಂ

ಘಟನೆಯ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳ ಬಳಿ ಚರ್ಚಿಸಿದ್ದು, ನಿಷ್ಪಕ್ಷಪಾತ ತನಿಖೆ ನಡೆಸಿ, ದುಷ್ಕೃತ್ಯ ಎಸಗಿದ ಪುಂಡರಿಗೆ ಕಾನೂನಿನ ಮೂಲಕ ತಕ್ಕ ಉತ್ತರ ನೀಡುವಂತೆ ಸೂಚನೆ ನೀಡಿದ್ದೇನೆ. ಈಗಾಗಲೇ ಪ್ರಕರಣದ ಸಂಬಂಧ ಕೆಲವು ಆರೋಪಿಗಳನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗುತ್ತಿದ್ದು, ಘಟನೆಗೆ ಕಾರಣರಾದ ಪ್ರತಿಯೊಬ್ಬರಿಗೂ ಶಿಕ್ಷೆ ನಿಶ್ಚಿತ ಎಂದಿದ್ದಾರೆ.

ನಾಡಿನ ಜನರಿಗೆ ಭಯಮುಕ್ತ, ನೆಮದಿಯ ಬದುಕು ನೀಡುವುದು ನಮ ಮೊದಲ ಆದ್ಯತೆ. ಜನರ ಶಾಂತಿ-ನೆಮದಿಗೆ ಭಂಗ ತರುವ ಯಾವುದೇ ವ್ಯಕ್ತಿ ಶಕ್ತಿಗಳನ್ನು ನಾವು ಸಹಿಸುವುದಿಲ್ಲ. ಸಾರ್ವಜನಿಕರು ಯಾವುದೇ ಪ್ರಚೋದನೆಗಳಿಗೂ ಕಿವಿಗೊಡದೆ, ಸಂಯಮದಿಂದ ವರ್ತಿಸಿ. ಪೊಲೀಸ್ ಇಲಾಖೆ ತನ್ನ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ಮಾಡಲಿದೆ ಎಂದು ಹೇಳಿದ್ದಾರೆ.

## ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ರಾಜ್ಯದಲ್ಲಿ 2 ದಿನ ಮಳೆ ಸಾಧ್ಯತೆ

**ಬೆಂಗಳೂರು, ಫೆ.20-**ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತ ಪರಿಣಾಮದಿಂದ ರಾಜ್ಯದ ದಕ್ಷಿಣ ಒಳನಾಡು, ಮಲೆನಾಡು ಹಾಗೂ ಕರಾವಳಿ ಭಾಗದಲ್ಲಿ ಚದುರಿದಂತೆ ಕೆಲವೆಡೆ ಮಳೆಯಾಗುವ ಮುನ್ಸೂಚನೆಗಳಿವೆ.



ಇಂದಿನಿಂದ ಭಾನುವಾರದವರೆಗೆ ರಾಜ್ಯದ ಕೆಲವೆಡೆ ಅಕಾಲಿಕ ಹಗುರ ಮಳೆಯಾಗುವ ಸಾಧ್ಯತೆಗಳಿವೆ ಎಂದು ಹವಾಮಾನ ತಜ್ಞರು ತಿಳಿಸಿದ್ಧಾರೆ.ತಾಪಮಾನ ಏರಿಕೆಯಿಂದಾಗಿ ಸ್ಥಳೀಯವಾಗಿ ಕಡಿಮೆ ಗಾಳಿ ಒತ್ತಡ ವಾತಾವರಣ ಉಂಟಾಗಿ ಬೇಸಿಗೆಯಲ್ಲಿ ಮಳೆಯಾಗುವುದು ಸಹಜ ಪ್ರಕ್ರಿಯೆ. ಆದರೆ, ಚಳಿಗಾಲ ಆರಂಭಕ್ಕೂ ಮುನ್ನವೇ ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿದೆ.
ಇದರ ಜೊತೆಗೆ ಬಂಗಾಳ ಕೊಲ್ಲಿಯಲ್ಲಿ ಲಘು ವಾಯುಭಾರ ಕುಸಿತವಾಗಿದ್ದು, ತಮಿಳುನಾಡು, ಶ್ರೀಲಂಕಾ ಹಾಗೂ ಅಂಡಮಾನ್ ನಿಕೋಬಾರ್ ದ್ವಿ?ಪದ ಕಡೆಗಳಲ್ಲಿ ಮಳೆ ನಿರೀಕ್ಷಿಸಬಹುದಾಗಿದೆ ಎಂದು ಹವಾಮಾನ ತಜ್ಞ ವಿ.ಎಸ್.ಪ್ರಕಾಶ್ ಹೇಳಿದ್ದಾರೆ.

ವಾಯುಭಾರ ಕುಸಿತ ಪರಿಣಾಮದಿಂದ ರಾಜ್ಯದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ದಕ್ಷಿಣ ಒಳನಾಡಿನಲ್ಲಿ ಚದುರಿದಂತೆ ಹಗುರದಿಂದ ಸಾಧಾರಣ ಮಳೆಯಾಗುವ ಮುನ್ಸೂಚನೆಗಳು ಕಂಡು ಬರುತ್ತಿವೆ. ರಾಜ್ಯದಲ್ಲಿ ಒಣ ಹವೆ ಮುಂದುವರೆಯಲಿದ್ದು, ವ್ಯಾಪಕವಾಗಿ ಎಲ್ಲೆಡೆ ಮಳೆಯಾಗುವುದಿಲ್ಲ. ಅಲ್ಲಲ್ಲಿ ಮಾತ್ರ ಮಳೆಯಾಗುವ ಸಾಧ್ಯತೆಗಳಿವೆ ಎಂದು ಅವರು ತಿಳಿಸಿದ್ದಾರೆ.ಭಾನುವಾರದವರೆಗೂ ಮಳೆಯಾಗುವ ಲಕ್ಷಣಗಳು ಕಂಡುಬರುತ್ತಿವೆ. ಫೆಬ್ರವರಿಯ ನಂತರ ಬೇಸಿಗೆ ಮಳೆ ಕೆಲವೆಡೆ ಆಗುವುದು ಸ್ವಾಭಾವಿಕ. ವಾಯುಭಾರ ಕುಸಿತದಿಂದ ತಮಿಳುನಾಡಿನಲ್ಲಿ ಹೆಚ್ಚು ಮಳೆಯಾಗಬಹುದು. ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳ ಕೆಲವೆಡೆ ಹಗುರ ಮಳೆ ಇನ್ನೆರಡು ದಿನ ಬೀಳುವ ನಿರೀಕ್ಷೆ ಇದೆ ಎಂದು ಅವರು ಹೇಳಿದ್ದಾರೆ.

## ಜೂಜಾಟದಲ್ಲಿ ತೊಡಗಿದ್ದ ಇಬ್ಬರು ಪೊಲೀಸರ ಅಮಾನತು

**ಚಿತ್ತಾಪುರ;ಫೆ.20-** ತಾಲೂಕಿನ ದಿಗ್ಗಾಂವ ಗ್ರಾಮದಿಂದ ಬೆನಕನಳ್ಳಿ ಗ್ರಾಮದ ಕಡೆಗೆ ಹೋಗುವ ರಸ್ತೆಯ ಪಕ್ಕದ ಸಾರ್ವಜನಿಕ ಸ್ಥಳದಲ್ಲಿ ಇಸ್ಪಿಟ್ ಜೂಜಾಟ ಆಡುವ ವೇಳೆ ಸಿಕ್ಕಿ ಬಿದ್ದಿರುವ ಇಬ್ಬರು ಪೊಲೀಸರನ್ನು ಕಲಬುರಗಿ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ ಅವರು ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತುಗೊಳಿಸಿದ್ದಾರೆ.ಕಲಬುರಗಿ ನಗರದ ಎಂ.ಬಿ ನಗರದ ಪೊಲೀಸ್ ಠಾಣೆ ಸಿವಿಲ್ ಪೊಲೀಸ್ ಕಾನ್ಸಟೇಬಲ್ ಗುರುನಾಥ ಹಾಗೂ ಸಶಸ್ತ್ರ ಮೀಸಲು ಘಟಕದ ಕಾನ್ಸಟೇಬಲ್ ಮಡಿವಾಳಪ್ಪ ಅವರೇ ಅಮಾನತುಗೊಂಡವರು.ಇವರು ಫೆ.17ರಂದು ಇಸ್ಪೀಟ್ ಜೂಜಾಟವಾಡುತ್ತಿದ್ದಾರೆ ಎನ್ನುವ ಖಚಿತ ಮಾಹಿತಿ ಆಧರಿಸಿ ಚಿತ್ತಾಪುರ ಪಿಎಸ್'ಐ ಮಂಜುನಾಥ ರೆಡ್ಡಿ ನೇತೃತ್ವದಲ್ಲಿ ಸಿಬ್ಬಂದಿಗಳು ದಾಳಿ ನಡೆಸಿದಾಗ ಸಿಕ್ಕಿ ಬಿದ್ದಿದ್ದಾರೆ.

ಬಂಧಿತರಿಂದ 2750 ರೂ. ವಶಕ್ಕೆ ಪಡೆದುಕೊಂಡು ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

## ಮಾನ್ವಿ ತಾಲೂಕು 11 ನೇ ಸಮ್ಮೇಳನಾಧ್ಯಕ್ಷರಾಗಿ ಡಾ.ಬಸವಪ್ರಭು ಪಾಟೀಲ್ ಆಯ್ಕೆ



ಯುವಮಾರ್ಗ ಸುದ್ದಿ



**ಮಾನ್ವಿ:ಫೆ.20-** ತಾಲೂಕಿನ ಹಿರಿಯ ಸಾಹಿತಿ ಡಾ.ಬಸವಪ್ರಭು ಪಾಟೀಲ ಬೆಟ್ಟದೂರು ರವರು ಫೆ.28 ರಂದು ನಡೆಯುವ ಮಾನ್ವಿ ತಾಲೂಕು 11 ನೇ ಕನ್ನಡಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

11 ನೇ ಸಮ್ಮೇಳನಾಧ್ಯಕ್ಷರ ಕಿರು ಪರಿಚಯ: ಹಿರಿಯ ಸಾಹಿತಿ, ರಾಜ್ಯಮಟ್ಟದ ಪತ್ರಿಕೆಯ ತಾಲೂಕು ವರದಿಗಾರರಾಗಿ ಡಾ.ಬಸವಪ್ರಭು ಪಾಟೀಲ ಬೆಟ್ಟದೂರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೆ ಆದ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ ಮಾನ್ವಿ ತಾಲೂಕಿನ ಸಣ್ಣ ಗ್ರಾಮ ಬೆಟ್ಟದೂರು ಗ್ರಾಮದಲ್ಲಿ ಚೆನ್ನಬಸವಪ್ಪ ಹಾಗೂ ಅಮರಮ್ಮ ದಂಪತಿಗಳ ಹಿರಿಯ ಪುತ್ರರಾಗಿ ಡಾ.ಬಸವಪ್ರಭು ಪಾಟೀಲ ಬೆಟ್ಟದೂರು ರವರು 1947ರ ಜುಲೈ ತಿಂಗಳು ದೇಶಕ್ಕೆ ಸ್ವಾತಂತ್ರ ದೊರೆಯುವ ಸಮಯದಲ್ಲಿ ಜನಿಸಿದವರು. ಬಳ್ಳಾರಿಯ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪದವಿಯನ್ನು ಪಡೆದು ಮಾನ್ವಿಯಲ್ಲಿ ಕಲ್ಯಾಣ ವೈದ್ಯಾಲಯದ ಮೂಲಕ ಸಾರ್ವಜನಿಕ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡ ಸಮಯದಲ್ಲಿ ಆಸ್ಪತ್ರೆಗೆ ಬರುವ ವಿವಿಧ ಹಳ್ಳಿಗಳ ಜನರ ಜೀವನ ಬದುಕು,ಅನುಭವಗಳೇ ಇವರ ಸಾಹಿತ್ಯ ಕೃಷಿಗೆ ಮುನ್ನುಡಿಯಾಗಿದರ ಜೋತೆಗೆ ಜನಸಾಮನ್ಯರಾಡುವ ಅವರದೆ ಬಾಷೆಯಲ್ಲಿ ಸಾಹಿತ್ಯವನ್ನು ಕಟ್ಟಿಕೊಡುವ ಬಾಷಶೈಲಿಯನ್ನು ಸಿದ್ದಿಸಿ ಕೊಂಡು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೆ ಆದ ಪ್ರತ್ಯಕವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಕೃತಿಗಳು : ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮನ್ನು ದುಡಿಸಿಕೊಂಡಿರುವ ಇವರ ಪ್ರಸಿದ್ಧ ಕೃತಿಗಳೆಂದರೆ ಮಾತಾಡಿ ಹೆಣಗಳೇ ಕವನ ಸಂಕಲನ, ಇದೇನು ಕತೆ ಟೀಕಾಕೃತಿ, ಮನವೇ ಬೀಜ ಶರಣರ ವಚನಗಳಲ್ಲಿ ಮನಸಿನ ಕುರಿತು ಹೇಳಿದ ಮಾತುಗಳ ಸಂಕಲನ, ನಾಟಕ ಪ್ರಕಾರದಲ್ಲಿ ಬೆಳಗು, ಪ್ರವಾಸ ಕಥನಕಗಳು ಯೂರೋಪಿನಲ್ಲಿ ಹಾಗೂ ಬಸವನಾಡಿನಿಂದ ಮಂಡೇಲಾ ನಾಡಿಗೆ , ಸವಿಗಾಳು ಚುಟುಕುಗಳ ಸಂಕಲನ, ಮಾನ್ವಿ ತಾಲೂಕಿನ ಕುರಿತು ಕ್ಷೇತ್ರ ಪರಿಚಯ ಕೃತಿ. ಇಮಾಂಬೀ ಮತ್ತು ಇತರ ಕತೆಗಳು ಕಥಾ ಸಂಕಲನ, ರಾಯಗಡದ ರಾಣಿ, ಇಂದ್ರಿಯ ನಿಗ್ರಹ ಮಾಡಿದರೆ ಕಾದಂಬರಿಗಳು, ಸಂಗಡಿಗರ ಸಮಿತಿ ಮೂಲಕ ಹಲವು ಪುಸ್ತಕಗಳ ಸಂಪಾದನೆ. ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ರಾಯಚೂರಿನಲ್ಲಿ 82 ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಅಯೋಜನೆ. ನಂತರ ಕಸಾಪವನ್ನು ಗ್ರಾಮೀಣ ಭಾಗಕ್ಕೂ ಕೊಂಡೊಯ್ಯುವ ಉದ್ದೇಶದಿಂದ ಮಾನ್ವಿ ತಾಲೂಕಿನ ಪೋತ್ನಾಳ್ ಗ್ರಾಮದಲ್ಲಿ ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಅಯೋಜಿಸುವ ಮೂಲಕ ಗಡಿ ಭಾಗದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿರುವ ಹಿರಿಯ ಸಾಹಿತಿ ಡಾ.ಬಸವಪ್ರಭು ಪಾಟೀಲ ಬೆಟ್ಟದೂರು ರವರಿಗೆ 11 ನೇ ಸಮ್ಮೇಳನಾಧ್ಯಕ್ಷರ ಮುಕುಟ ಮುಡಿಗೇರಿರುವುದು ತಾಲೂಕಿನ ಕನ್ನಡ ಪ್ರೇಮಿಗಳಿಗೆ ಹೆಮ್ಮೆಮೂಡಿಸಿದೆ

## ನ್ಯೂನ್ಯತೆಯುಳ್ಳ ಮಕ್ಕಳಿಗೆ ತಜ್ಞ ವೈದ್ಯರಿಂದ ತಪಾಸಣೆ ಶಿಬಿರ



ಯುವಮಾರ್ಗ ಸುದ್ದಿ

**ರಾಯಚೂರು ಫೆ,20-** ಆರ್‌ಬಿಎಸ್‌ಕೆ ವೈದ್ಯಕೀಯ ತಂಡವು ಕ್ಷೇತ್ರ ಮಟ್ಟದಲ್ಲಿ ಗುರುತಿಸಿದ ನ್ಯೂನ್ಯತೆಯುಳ್ಳ ಮಕ್ಕಳಿಗೆ ತಜ್ಞ ವೈದ್ಯರಿಂದ ಫೆ.20ರಂದು ತಪಾಸಣೆ ಶಿಬಿರ ನಡೆಯಿತು.
ರಾಯಚೂರು ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ನಡೆದ ಈ ಶಿಬಿರದಲ್ಲಿ ಹುಟ್ಟಿನಿಂದ 18 ವರ್ಷದೊಳಗಿನ ಜನ್ಮಜಾತ ಹೃದಯ ಖಾಯಿಲೆಯ 14 ಮಕ್ಕಳು, ಶೀಳು ತುಟಿ, ಶೀಳು ಅಂಗಳದ 3 ಮಕ್ಕಳಿಗೆ ತಪಾಸಣೆ ಮಾಡಲಾಯಿತು. ಮಕ್ಕಳ ತಜ್ಞರಾದ ಡಾ.ಇಮ್ರಾನ್ ತಪಾಸಣೆ ನಡೆಸಿದರು.

ಜಿಲ್ಲೆಯಲ್ಲಿ ಪ್ರಸ್ತುತ 12 ಆರ್‌ಬಿಎಸ್‌ಕೆ ವೈದ್ಯಕೀಯ ತಂಡಗಳ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ತಂಡದಲ್ಲಿ ವೈದ್ಯರು, ಶೂಶ್ರೂಷಕರು, ನೇತ್ರಾಧಿಕಾರಿಗಳು ಇದ್ದು, ಅಂಗನವಾಡಿ, ಶಾಲೆಗಳಲ್ಲಿ ತಪಾಸಣೆ ಕೈಗೊಂಡು ರಾಯಚೂರನ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಮುಖ್ಯ ವೈದ್ಯಾಧಿಕಾರಿ ಡಾ.ಪ್ರಜ್ವಲ್ ಕುಮಾರ್ ನೇತೃತ್ವದಲ್ಲಿ ಪ್ರತಿ ಮಂಗಳವಾರ, ಶುಕ್ರವಾರ ಮಕ್ಕಳ ತಜ್ಞರಿಂದ ತಪಾಸಣೆ ಮಾಡಿಸಲಾಗುತ್ತದೆ. ಇದಕ್ಕೆ ನವೋದಯ ಹಾಗೂ ರಿಮ್ಸ್ ಆಸ್ಪತ್ರೆಯ ತಜ್ಞರು ಕೈಜೋಡಿಸಿದ್ದಾರೆ.
ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರ: ಮಕ್ಕಳ ಬೆಳವಣಿಗೆಗೆ ಕಾರಣವಾಗುವ ನಾಲ್ಕು ಕಾರಣಗಳನ್ನು ಗುರುತಿಸಿ ಮಕ್ಕಳ ತಜ್ಞರು, ಇಎನ್‌ಟಿ ತಜ್ಞರು, ಮಾನಸಿಕ ತಜ್ಞರು, ಪೀಜಿಯೋ ಥೆರಪಿಸ್ಟ್ ಅವರು ಅಗತ್ಯ ಚಿಕಿತ್ಸೆ, ಸಲಹೆಗಳನ್ನು ನೀಡುತ್ತಾರೆ. ಪ್ರಸ್ತುತ ಪ್ರತಿದಿನ 15-20 ಮಕ್ಕಳು ಕೇಂದ್ರದ ಸದುಪಯೋಗ ಪಡೆಯುತ್ತಿದ್ದಾರೆ.
ಖಾಸಗಿ ಆಸ್ಪತ್ರೆಗಳಲ್ಲಿ ಸಹ ಚಿಕಿತ್ಸೆ: ಜನ್ಮಾಜಾತ ಹೃದಯ ಸಂಬಂಧಿ ಖಾಯಿಲೆಗಳ ತುರ್ತು ಶಸ್ತ್ರಚಿಕಿತ್ಸೆಗಳಿಗಾಗಿ ಸರಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡ ಬೆಂಗಳೂರಿನ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ.

ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ಮಾತನಾಡಿ, ಪಾಲಕರು ತಮ್ಮ ಮಗುವಿಗೆ ಆರೋಗ್ಯ ಸಮಸ್ಯೆಗಳಿಗೆ ಹಲವು ಬಾರಿ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಆರ್ಥಿಕ ತೊಂದರೆಗೊಳಗಾಗುವುದನ್ನು ತಪ್ಪಿಸಲು ಸರಕಾರ ಅನುಷ್ಠಾನ ವಾಡಿರುವ ಯೋಜನೆ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮವಾಗಿದೆ. ಮಕ್ಕಳ ಜನನದ ನಂತರದ ಆರಂಭದಲ್ಲಿ ಕಂಡು ಬರುವ ಬೆಳವಣಿಗೆಗೆ ಕುಂಠಿತವಾಗುವ ಗಂಭೀರ ಆರೋಗ್ಯ ಸಮಸ್ಯೆಗಳಾದ ಜನ್ಮಾಜಾತ ಹೃದಯ ಸಂಬಂಧಿ ಖಾಯಿಲೆಗಳು (ಸಿಹೆಚ್‌ಡಿ), ಸೀಳು ತುಟಿ, ವಕ್ರಪಾದ, ಮಾನಸಿಕ ಆರೋಗ್ಯ ಸಮಸ್ಯೆಗಳು, ಸೀಳು ಅಂಗಳ, ಕೀವಿ ಕೇಳದಿರುವುದು, ದೈಹಿಕ ನ್ಯೂನ್ಯತೆಗಳಿರುವವರಿಗೆ ಪೀಜಿಯೋಥೆರಪಿ ಸೇರಿದಂತೆ ಮಗುವಿನ ಬೆಳವಣಿಗೆಗೆ ಅಡ್ಡಿಪಡಿಸುವ ಆರೋಗ್ಯ ಸಮಸ್ಯೆಗಳಿಗೆ ರಾಷ್ಟ್ರೀಯ ಬಾಲ್ಯ ಸ್ವಾಸ್ಥ್ಯ ಕಾರ್ಯಕ್ರಮದಡಿ ಮಕ್ಕಳಿಗೆ ಉಚಿತ ಪರೀಕ್ಷೆ, ಅಗತ್ಯವಿರುವ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಸಹ ಕೈಗೊಳ್ಳಲಾಗುತ್ತಿದ್ದು ಪಾಲಕರು ನೆಮ್ಮದಿಯಿಂದ ತಮ್ಮ ಮುದ್ದು ಮಗುವಿನ ಸಂತಸದ ಕ್ಷಣಗಳನ್ನು ಆಸ್ವಾದಿಸಲು ಸಾಧ್ಯವಾಗುತ್ತಿದೆ ಎಂದು ತಿಳಿಸಿದರು.

ಸಿಹೆಚ್‌ಡಿ ಪತ್ತೆಗಾಗಿ ರಾಯಚೂರು ಜಿಲ್ಲೆಯಲ್ಲಿ ಓಪೆಕ್ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯೊಂದಿಗೆ ಇಕೊ ಟೆಸ್ಟ್ ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಇದರಿಂದ ಸಮಯ ಉಳಿತಾಯವಾಗಲಿದೆ. ಎಲ್ಲ ತಾಲೂಕುಗಳಲ್ಲಿ ಗುರುತಿಸಲ್ಪಟ್ಟ ಸಮಸ್ಯೆ ಇರುವ ಮಕ್ಕಳನ್ನು ಇಲ್ಲಿ ತಪಾಸಣೆ ಮಾಡಲಾಗುವುದು ಎಂದರು.
ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದೀತಾ ಎಮ್ ಎನ್ ಮಾತನಾಡಿ, ಜಿಲ್ಲೆಯಲ್ಲಿ ನವಜಾತ ಶಿಶುಗಳ ಕುಂಠಿತ ಬೆಳವಣಿಗೆಗೆ ಕಾರಣವಾಗುವ ಗಂಭೀರ ಸಮಸ್ಯೆಗಳಿಗೆ ಪಾಲಕರಿಗೆ ಆರ್ಥಿಕ ಹೊರೆಯನ್ನು ತಪ್ಪಿಸಿ ಅಗತ್ಯ ವೈದ್ಯಕೀಯ ಪರೀಕ್ಷೆ, ಚಿಕಿತ್ಸೆ, ಅನುಸರಣೆ ಕೈಗೊಂಡು ನೆಮ್ಮದಿಯ ಭವಿಷ್ಯಕ್ಕೆ ನಿಮ್ಮ ಆರೋಗ್ಯ - ನಮ್ಮ ಆಧ್ಯತೆ ಎಂಬ ಧ್ಯೇಯದಂತೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಇಂದಿನ ತಪಾಸಣೆ ವೇಳೆ ಡಾ.ಸಂಧ್ಯಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಹಿರಿಯ ಶುಶ್ರೂಷಣಾಧಿಕಾರಿ ಸಲೋಮಿ, ಡಿವೈಹೆಚ್‌ಇಓ ಬಸಯ್ಯ, ಡಿಪಿಎವ್ ನವೀನ್‌ಕುಮಾರ, ಆರ್‌ಬಿಎಸ್‌ಕೆ ಕಲ್ಸಂಟ್ ಸಿದ್ದಮ್ಮ, ಬಿಹೆಚ್‌ಇಓ ಸರೋಜಾ ಕೆ, ಡಿಇಐಸಿ ತಂಡದ ಸಿಬ್ಬಂದಿ ಉಪಸ್ಥಿತರಿದ್ದರು.

# ಉಗ್ರ ಜುನೈದ್ ಸುಳಿವು ನೀಡಿದವರಿಗೆ 5 ಲಕ್ಷ ಬಹುಮಾನ




**ಬೆಂಗಳೂರು,ಫೆ.20–** ಮೋಸ್ಟ್ ವಾಂಟೆಡ್ ಉಗ್ರ ಜುನೈದ್ ಅಹಮ್ಮದ್ ಸುಳಿವು ನೀಡಿದವರಿಗೆ 5 ಲಕ್ಷ ರೂ ಬಹುಮಾನ ನೀಡುವುದಾಗಿ ರಾಷ್ಟ್ರೀಯ ತನಿಖಾ ದಳ( ಎನ್ಐಎ) ಘೋಷಿಸಿದೆ.

ಮೋಸ್ಟ್ ವಾಂಟೆಡ್ ಲಷ್ಕರ್ ಎ ತೊಯ್ಬಾ ಉಗ್ರ ಜುನೈದ್ ಅಹಮ್ಮದ್ ಬಂಧನಕ್ಕೆ ಎನ್ ಐಎ ಅಧಿಕಾರಿಗಳು ತೀವ್ರ ಶೋಧ ಕೈಗೊಂಡಿದ್ದಾರೆ.

ಕಳೆದ ಮೂರು ವರ್ಷದಿಂದ ಎನ್ಐಎ ಅಧಿಕಾರಿಗಳು ದೇಶ, ಹೊರದೇಶದಲ್ಲಿ ಹುಡುಕಾಟ ನಡೆಸುತ್ತಿದ್ದಾರೆ. ಮೋಸ್ಟ್ ವಾಂಟೆಡ್ ಉಗ್ರ ಜುನೈದ್ ಅಹಮದ್ ಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಶಂಕಿತ ಉಗ್ರ ಜುನೈದ್ ಬಗ್ಗೆ ಸುಳಿವು ಸಿಕ್ಕಿಲ್ಲ. ಹಾಗಾಗಿ, ಉಗ್ರನ ಸುಳಿವು ಕೊಟ್ಟರೆ 5 ಲಕ್ಷ ರೂ. ಬಹುಮಾನ ನೀಡುವುದಾಗಿ ಘೋಷಣೆ ಮಾಡಿದ್ದಾರೆ.

ನಗರದ ಜನನಿಬಿಡ ಪ್ರದೇಶ ಮೆಜೆಸ್ಟಿಕ್ ಪ್ರತಿ ಕಂಬಗಳಿಗೂ, ವಾಂಟೆಡ್ ಉಗ್ರನ ಬಗ್ಗೆ ಮಾಹಿತಿ ನೀಡಿದರೆ 5 ಲಕ್ಷ ಬಹುಮಾನ ಕೊಡುವುದಾಗಿ ಪೋಸ್ಟರ್ ಹಾಕಿದ್ದಾರೆ. 2023 ರಲ್ಲಿ ಸಿಸಿಬಿ ಪೊಲೀಸರು ಭೇದಿಸಿದ ಉಗ್ರ ಸಂಚಿನ ಪ್ರಕರಣದ ಪ್ರಮುಖ ರೂವಾರಿ ಜುನೈದ್ ಅಮಹ್ಮದ್. ಉಗ್ರ ತನ್ನ ಮನೆಯಲ್ಲಿ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಹಾಗೂ ಸ್ಫೋಟಕಗಳನ್ನು ವಶಪಡಿಸಿಕೊಂಡ ಪ್ರಕರಣದಲ್ಲಿ ಬೇಕಾಗಿರುವ ಉಗ್ರನಾಗಿದ್ದಾನೆ.

ಈ ಹಿಂದೆ ರಕ್ತಚಂದನ ಕೇಸ್‌ನಲ್ಲಿ ಬಂಧನವಾಗಿದ್ದ ಜುನೇದ್ ಅಹ್ಮದ್. ನಂತರ ಜೈಲಿನಲ್ಲಿ ಟಿ.ನಾಸೀರ್‌ನಿಂದ ಪ್ರೇರಿತನಾಗಿ ಉಗ್ರ ಸಂಘಟನೆ ಸೇರಿದ್ದ. ಜೈಲಿನಿಂದ ಬಿಡುಗಡೆಯಾಗಿ ದುಬೈ ಹೋಗಿ ಅಲ್ಲಿಂದ ಸಹಚರಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡಿರುವ ಆರೋಪ ಇದೆ.ನಾಗಶೆಟ್ಟಿಹಳ್ಳಿ ನಿವಾಸಿಯಾಗಿದ್ದ ಜುನೇದ್ ಅಹ್ಮದ್ ಬಂಧನಕ್ಕೆ ನಗರದಾದ್ಯಂತ ಎನ್ಐಎ ಅಧಿಕಾರಿಗಳು ವಾಂಟೆಡ್ ಪೋಸ್ಟರ್ ಅಂಟಿಸುತ್ತಿದ್ದಾರೆ.

# ಜುಲೈ ಅಂತ್ಯಕ್ಕೆ ಈಜಿಪುರ ಫ್ಲೈಓವರ್ ಪೂರ್ಣ



**ಬೆಂಗಳೂರು, ಫೆ. 20–** ಈಜಿಪುರ ಫ್ಲೈಓವರ್ ಜುಲೈ ಅಂತ್ಯದೊಳಗೆ ಪೂರ್ಣ. ಈಜೀಪುರ ಮೇಲ್ಸೇತುವೆಯ ಸಂಪೂರ್ಣ ಕಾಮಗಾರಿಯನ್ನು ಜುಲೈ ಅಂತ್ಯದೊಳಗೆ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಅನುಕೂಲ ಮಾಡಬೇಕು ಎಂದು ಜಿಬಿಎ ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್ ಅವರು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದ ವೇಳೆ ಅವರು ಮಾತನಾಡಿ, ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದರು. ಹೆಚ್ಚಿನ ಯಂತ್ರೋಪಕರಣಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಿ ಎಲ್ಲಾ ಕಾರ್ಯಚಟುವಟಿಕೆಗಳನ್ನು ಏಕಕಾಲದಲ್ಲಿ ನಡೆಸಿ ವೇಗಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು.

ಸೆಂಟ್ ಜಾನ್ಸ್ ಬಳಿ ಪಿಲ್ಲರ್ ಅಳವಡಿಕೆಗೆ ಇದ್ದ ತೊಡಕು ನಿವಾರಣೆಯಾಗಿದ್ದು ಮೂರು ವಾರಗಳು ಕಳೆದಿದ್ದರೂ ಪೈಲಿಂಗ್ ಕೆಲಸ ವಿಳಂಬವಾಗಿ ಆರಂಭಿಸಿರುವುದನ್ನು ಗಮನಿಸಿ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡರು.

ಪೈಲಿಂಗ್ ಕೆಲಸವನ್ನು 15 ದಿನಗಳೊಳಗೆ ಪೂರ್ಣಗೊಳಿಸಲು ಸೂಚಸಿ. ಸೆಗ್ಮೆಂಟ್ ಕಾಸ್ಟಿಂಗ್ ಕಾರ್ಯವನ್ನು ವೇಗಗೊಳಿಸುವುದು 24 ಗಂಟೆಗಳ ಕಾಲ ಕಾಮಗಾರಿ ನಡೆಸಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಆದೇಶ ನೀಡಿದರು.ಇನ್ನೂ ರ್ಯಾಂಪ್ ಕಾಮಗಾರಿ ತ್ವರಿತಗೊಳಿಸಿ ಮಡಿವಾಳ ಕಡೆ ಡೌನ್ ರ್ಯಾಂಪ್ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಸಂಚಾರಿ ಪೊಲೀಸ್ ಇಲಾಖೆಯಿಂದ ಭಾಗಶಃ ರಸ್ತೆ ನಿರ್ಬಂಧಕ್ಕೆ ಅನುಮತಿ ಪಡೆಯುವುದು. ಮಳೆನೀರು ಹರಿವುಗಾಗಿ ಪೈಪ್‌ಲೈನ್ ಕಾಮಗಾರಿ ಕೈಗೊಳ್ಳುವುದು.ಕೇಂದ್ರೀಯ ಸದನ್ ಹಾಗೂ ಆಸ್ಟ್ರೋ ಫಿಜಿಕ್ಸ್ ಜಾಗವನ್ನು ವಶಪಡಿಸಿಕೊಂಡು ಪಾದಚಾರಿ ಮಾರ್ಗ ನಿರ್ಮಾಣಕ್ಕೆ ಕ್ರಮ ವಹಿಸಬೇಕು.ಸರ್ಜಾಪುರ ರಸ್ತೆಯ

1.06 ಕಿ.ಮೀ ರಸ್ತೆ ಕಾಮಗಾರಿ ಪ್ರಗತಿಯಲ್ಲಿದ್ದುಒಂದು ಭಾಗ ಪೂರ್ಣಗೊಂಡು ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.ಉಳಿದ 50% ಕಾಮಗಾರಿ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ.ರಾತ್ರಿ ವೇಳೆ ಗಸ್ತು ಸ್ಥಳೀಯ ಪೊಲೀಸರ ಜೊತೆ ಕೈಜೊಡಿಸಿ ಕಸ ಎಸೆಯುವತ ವಿರುದ್ಧ ದಂಡ ವಿಧಿಸಿ ಎಂದು ಸೂಚಿಸಿ. ಸುಲ್ತನ್ ಪೇಟೆ ರಸ್ತೆಯಲ್ಲಿ 1.15 ಕಿ.ಮೀ ವೈಟ್ ಟಾಪಿಂಗ್ ಕಾಮಗಾರಿ ಮಾರ್ಚ್ 15ರಿಂದ ಕಾಮಗಾರಿ ಆರಂಭಕ್ಕೂ ಮುನ್ನ ಜಲಮಂಡಳಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಿದರು..

ಇನ್ನೂ ಪರಿಶೀಲನೆ ಸಂದರ್ಭದಲ್ಲಿ ನಗರ ಪಾಲಿಕೆ ಆಯುಕ್ತರಾದ ರಮೇಶ್ ಕೆ.ಎನ್., ಮುಖ್ಯ ಅಭಿಯಂತರರಾದ ರವಿ, ಡಾ. ರಾಘವೇಂದ್ರ ಪ್ರಸಾದ್ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

# ಸಫಾರಿ ಪುನರಾರಂಭ: ಅರಣ್ಯ ಭವನಕ್ಕೆ ರೈತರಿಂದ ಮುತ್ತಿಗೆ




**ಮೈಸೂರು: ಫೆ.20:–** ನಾಗರಹೊಳೆ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಸಫಾರಿ ಪುನರಾರಂಭಕ್ಕೆ ಸರಕಾರ ಅನುಮತಿ ನೀಡಿರುವುದನ್ನು ಖಂಡಿಸಿ ಅರಣ್ಯ ಭವನಕ್ಕೆ ರೈತರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ. ರೆಸಾರ್ಟ್ ಮಾಲೀಕರು ಮತ್ತು ಹಣವಂತ್ತರಿಗೆ ಮಣಿದು ಸರಕಾರ ಅನುಮತಿ ನೀಡಿದೆ ಎಂದು ರೈತ ಮುಖಂಡರು ಆರೋಪಿಸಿದ್ದಾರೆ.

ಬೆಳಗ್ಗೆ 11 ಗಂಟೆಯಲ್ಲಿ ನಗರದ ಅಶೋಕಾಪುರಂ ಅರಣ್ಯ ಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ರೈತರನ್ನು ಮುಖ್ಯ ದ್ವಾರದ ಬಳಿಯೆ ತಡೆಯಲಾಯಿತು. ರೈತ ಮುಖಂಡ ಹಳ್ಳಿಕೆರೆ ಭಾಗ್ಯರಾಜ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಡಂಚಿನ ಗ್ರಾಮಗಳ ರೈತ ಮುಖಂಡರು ಭಾಗವಹಿಸಿದ್ದರು.

ಬಂಡೀಪುರ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಅಕ್ರಮ ರೆಸಾರ್ಟಾಗಳಿಗೆ ಅನುಮತಿ ನೀಡಲಾಗಿದ್ದು, ಸಫಾರಿ ಬಂದ್ ಮಾಡಿದ್ದರಿಂದ ರೆಸಾರ್ಟಾಗಳಿಗೆ ನಷ್ಟವಾಗಿದೆ ಎಂದು ಪ್ರತಿಪಾದಿಸಲಾಗಿತ್ತು. ಅಲ್ಲದೆ, ಕೆಲ ರೆಸಾರ್ಟ್ ಮಾಲೀಕರು ಪ್ರಾಯೋಜಕತ್ವದ ಪ್ರತಿಭಟನೆಗಳನ್ನು ನಡೆಸಿ ಸರಕಾರದ ಮೇಲೆ ಒತ್ತಡೆ ಹೇರಿದ್ದರು. ಆದರೆ, ರೈತರು ಮಾತ್ರ ಕಾಡು ಉಳಿಯಬೇಕು, ಕಾಡು ಪ್ರಾಣಿಗಳು ಗ್ರಾಮಗಳಿಗೆ ಬರದಂತೆ ತಡೆಗಟ್ಟಬೇಕಾದರೆ ಸಫಾರಿ ನಿಲ್ಲಿಸಬೇಕೆಂದು ಆಗ್ರಹಿಸಿ ನಿರಂತರ ಪ್ರತಿಭಟನೆ ನಡೆಸುತ್ತಿದ್ದರು.

ಆದರೆ, ರಾಜ್ಯ ಸರಕಾರ ನಿನ್ನೆ ಬಂಡೀಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಹಿಂದಿನದಕ್ಕಿಂತ್ತ ಶೇ. 50ರಷ್ಟು ಪ್ರಮಾಣದಲ್ಲಿ ಹಾಗೂ ಕಡಿಮೆ ಅವದಿಗೆ ಸಫಾರಿಯನ್ನು ಹಂತ ಹಂತವಾಗಿ ಪುನರಾರಂಭ ಮಾಡಲು ಅನುಮತಿ ನೀಡಿದೆ. ಇದನ್ನು ವಿರೋಧಿಸಿ ರೈತರು ಇಂದು ಅರಣ್ಯ ಭವನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ. ಪ್ರವಾಸಕ್ಕೆಂದು ಬಂದು ಮೋಜು, ಮಸ್ತಿಗೆ ಸಫಾರಿ ಮಾಡಿ ಪ್ರಾಣಿಗಳನ್ನು ನೋಡಿದ ಬಳಿಕ ಏಸಿ ರೂಂಗಳಲ್ಲಿ ಮಲಗುವ ಶ್ರೀಮಂತರಿಗೆ ಕಾಡಂಚಿನ ಜಮೀನುಗಳಲ್ಲಿ ದುಡಿಯುವ ರೈತರ ಕಷ್ಟ ಅರ್ಥವಾಗುವುದಿಲ್ಲ. ಪ್ರತಿದಿನ ಕಾಡು ಪ್ರಾಣಿಗಳ ದಾಳಿಗೆ ಅದೆಷ್ಟೋ ರೈತರು ಪ್ರಾಣಿ ತ್ಯಾಗ ಮಾಡಿದ್ದಾರೆ. ಲಕ್ಷಾಂತರ ರೂಪಾಯಿ ಬೆಳೆ ಹಾನಿ ಸಂಭವಿಸಿದೆ. ಸಫಾರಿ ಮಾಡುವುದರಿಂದ ಕಾಡು ಪ್ರಾಣಿಗಳೂ ಊರಿನೊಳಗೆ ಬರುತ್ತಿವೆ ಎಂದು ರೈತ ಮುಖಂಡ ಹಳ್ಳಿಕೆರೆ ಭಾಗ್ಯರಾಜ್ ಪ್ರತಿಪಾದಿಸಿದ್ದಾರೆ. ಬೆಂಗಳೂರಿನಲ್ಲಿ ಕುಳಿತು ಆದೇಶ ಮಾಡುವ ಮಂತ್ರಿಗಳು ಕಾಡು ಕಾಯಲು ಬರಬೇಕು. ಇಲ್ಲ ರೈತರ ಮುಂದೆ ಬಂದು ಆದೇಶ ಮಾಡಲಿ ಎಂದು ಸವಾಲು ಹಾಕಿದರು. ರೈತರಿಂದ ಓಟು ಪಡೆದು ಅಧಿಕಾರಕ್ಕೆ ಬಂದ ಜನ ರೈತರ ಹಕ್ಕೊತ್ತಾಯಗಳಿಗೆ ಮನ್ನಣೆ ನೀಡದೆ ಶ್ರೀಮಂತರ ಆಮೀಷಕ್ಕೆ ಒಳಗಾಗುತ್ತಿದೆ ಎಂದು ಅಪಾದಿಸಿದರು. ಪ್ರತಿಭಟನೆಯ ಉದ್ದಕ್ಕೂ ಸರಕಾರದ ವಿರುದ್ಧ ಘೋಷಣೆಗಳೂ ಕೇಳಿಬಂದಿತು.ಬಳಿಕ ಡಿಸಿಎಫ್ ಪರಮೇಶ್ ಅವರಿಗೆ ಹಕ್ಕು ಒತ್ತಾಯ ಪತ್ರ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ರಾಜ್ಯ ಖಜಾಂಚಿ ಕೆರೆಹುಂಡಿ ರಾಜಣ್ಣ, ಸಂಚಾಲಕ ಹನುಮಯ್ಯ, ಜಿಲ್ಲಾ ಕಾರ್ಯದರ್ಶಿ ಮಲಿಯೂರು ಮಹೇಂದ್ರ, ಪ್ರಕಾಶ್ ಗಾಂಧಿ, ಎಚ್.ಗುಂಡ್ಲ ಚಿದಂಬರ್, ಮುದ್ದಳ್ಳಿ ಮಧು, ಅಂಡುವಿನಹಳ್ಳಿ ಜಗದೀಶ್, ಮಹೇಶ್, ದೇವಣ್ಣ, ಚೇತನ್, ನವೀನ, ಬಸವಣ್ಣ, ಮಂಜು, ಮುಳ್ಳೂರು ಕುಮಾರ್ ನಾಯಕ, ಜಗದೀಶ್, ಮಹದೇವಸ್ವಾಮಿ, ಗಣೇಶ, ಧರ್ಮೇಂದ್ರ, ಮಂಜುನಾಥ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಆರ್ಥಿಕ ಮುಗ್ಗಟ್ಟು ಇಂದಿರಾ ಕ್ಯಾಂಟೀನ್ ಬಂದ್




**ಬೆಂಗಳೂರು,ಫೆ..20–** ಮಹೇಶ್. ಸಿ. ಸಿಎಂ ಕನಸಿನ ಕೂಸಿಗೆ ಅನುದಾನ ಇಲ್ಲದೆ ಇಂದಿರಾ ಕ್ಯಾಂಟೀನ್ ಕಿಚನ್ ಬಂದ್.

ಬಡವರಿಗೆ ದೀನದಲಿತರಿಗೆ ಕೂಲಿ ಕಾರ್ಮಿಕರಿಗೆ ಕಡಿಮೆ ವೆಚ್ಚದಲ್ಲಿ ಬೆಳಿಗ್ಗೆ ತಿಂಡಿ.ಮಧ್ಯಾಹ್ನ ಹಾಗೂ ರಾತ್ರಿ ವೇಳೆ ಊಟ ಸಿಗಲಿ ಅಂತ ಸಿಎಂ ಸಿದ್ದರಾಮಯ್ಯ ನವರು ನಗರದ ಪ್ರತಿಯೊಂದು ವಾರ್ಡ್ ನಲ್ಲಿ ಇಂದಿರಾ ಕ್ಯಾಂಟೀನ್ ಓಪನ್ ಆರಂಭಿಸಿದರು..ಅದರೆ ಕ್ಯಾಂಟೀನ್ ಗಳಲ್ಲಿ ಸರಿಯಾದ ನಿರ್ವಹಣೆ ಇಲ್ಲದೆ ಹಾಗೂ ಅಹಾರ ಪೂರೈಕೆ ಇಲ್ಲದೆ.ನಗರದ ಬಹುತೇಕ ಕ್ಯಾಂಟೀನ್ ಗಳು ಬಂದ್ ಆಗಿವೆ ಮೊದಲ ಬಾರಿಗೆ ಸಿದ್ದರಾಮಯ್ಯ ಸಿಎಂ ಆದಾಗ ನಗರಪಾಲಿಕೆ ವ್ಯಾಪ್ತಿಯಲ್ಲಿ 175 ಸ್ಥಿರ ಹಾಗೂ 27 ಮೊಬೈಲ್ ಕ್ಯಾಂಟೀನ್ ಗಳನ್ನು ಓಪನ್ ಮಾಡಿ. ಕ್ಯಾಂಟಿನ್ ಗಳಿಗೆ ಅಹಾರ ಪೂರೈಸಲು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಒಂದೊಂದು ಕಿಚನ್ ಓಪನ್ ಮಾಡಿದರು..ಅದರೆ ಈಗ ಅನುದಾನ ಇಲ್ಲದೆ 16 ಇಂದಿರಾ ಕ್ಯಾಂಟೀನ್ ಕಿಚನ್ ಗಳು ಬಂದ್ ಅಗಿವೆ.

175 ಸ್ಥಿರ ಕ್ಯಾಂಟೀನ್ ಗಳಲ್ಲಿ 169 ಕ್ಯಾಂಟೀನ್ ಗಳು ಓಪನ್ ಅಗಿದರೆ 6 ಕ್ಯಾಂಟೀನ್ ಗಳು ಬಂದ್ ಅಗಿವೇ.ಉಳಿದಂತೆ 24 ಮೊಬೈಲ್ ಕ್ಯಾಂಟೀನ್ ಗಳಲ್ಲಿ ಕೇವಲ 1 ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು.ಉಳಿದ 23 ಮೊಬೈಲ್ ಕ್ಯಾಂಟೀನ್ ಗಳು ಬಂದ್ ಅಗಿವೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಈ ರೀತಿಯಲ್ಲಿ ಕ್ಯಾಂಟೀನ್ ಗಳು ಪತನದ ದಾರಿ ಹಿಡಿದಿದೆ..

ಹೊಸ 50 ಕ್ಯಾಂಟೀನ್ ಓಪನ್ ಮಾಡೋದಕ್ಕೆ ಸಿಎಂ ಕಳೆದ ವರ್ಷ ಜಿಬಿಎಗೆ ಸೂಚನೆ ಕೊಟ್ಟಿದರು.ಅದರೆ ಇದುವರೆಗೆ ಓಪನ್ ಅಗಿಲ್ಲ..ಎರಡು ಮೂರು ಬಾರಿ ಟೆಂಡರ್ ಕರೆದರು ಯಾರು ಬರುತ್ತಿಲ್ಲ .ಇನ್ನೂ ಕ್ಯಾಂಟೀನ್ ಊಟದ ಗುಣಮಟ್ಟ .ನಿರ್ವಹಣೆ ಅಂತು ಹೇಳೋದೆ ಬೇಡ..ಕಳೆದ ತಿಂಗಳು ಪಶ್ಚಿಮ ವಲಯ ನಗರಪಾಲಿಕೆ ಅಯುಕ್ತರೆ ಊಟ.

ತಿಂಡಿ ಸರಿ ಇಲ್ಲ ಎಂದು ಖುದ್ದಾಗಿ ಅವರೇ ಹೇಳಿದ್ದಾರೆ..ಇದನ್ನೆಲ್ಲ ಮನಗಂಡ ಜಿಬಿಎ ಅಯುಕ್ತರು 5 ನಗರಪಾಲಿಕೆ ಅಯುಕ್ತರು ಹಾಗೂ ಅಧಿಕಾರಿಗಳ ಸಭೆ ನಡೆಸಿ ಕ್ಯಾಂಟೀನ್ ಕಿಚನ್ ಗಳನ್ನು ಮತ್ತೆ ರೀ ಓಪನ್ ಮಾಡಿ ಅಹಾರದ ಗುಣಮಟ್ಟ.ನಿರ್ವಹಣೆ ಸರಿಯಾದ ರೀತಿಯಲ್ಲಿ ಮಾಡುವಂತೆ ಸೂಚನೆ ನೀಡಿ. ಒಂದು ವೇಳೆ ಕ್ಯಾಂಟೀನ್ ನಿರ್ವಹಣೆಗೆ ಅದಾಯ ಕಡಿಮೆ ಅದರೆ ಕೆ.ಎಂ.ಎಫ್ ಅಥವಾ ಬಮೂಲ್ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ನೀಡಲು ಚಿಂತನೆ ನಡೆಸಿದ್ದರೆ..ಈ ಬಾರಿ ಬಜೆಟ್ ನಲ್ಲಿ ರಾಜ್ಯ ಸರ್ಕಾರ ಇಂದಿರಾ ಕ್ಯಾಂಟಿನ್ ಗೆ ಎಷ್ಟು ಅನುದಾನ ನೀಡುತ್ತೆ ಅನ್ನೋದರ ಮೇಲೆ ಇಂದಿರಾ ಕ್ಯಾಂಟೀನ್ ಭವಿಷ್ಯ ನಿಂತಿದೆ.

# ನಾವು ಮಾಲೀಕರೇ ಹೊರತು ಬಾಡಿಗೆದಾರರಲ್ಲ: ಡೋಪ್ಲಿನ್ ಕಾಂಪ್ಲೆಕ್ಸ್ ವರ್ತಕರ ಸ್ಪಷ್ಟನೆ




**ಮೈಸೂರು: ಫೆ.20:–** ಮೈಸೂರಿನ ಹೃದಯಭಾಗದಲ್ಲಿರುವ ಡೋಪ್ಲಿನ್ ಕಾಂಪ್ಲೆಕ್ಸ್' ಆಸ್ತಿ ವಶಕ್ಕೆ ಹೈಕೋರ್ಟ್ ತೀರ್ಪು ನೀಡಿದ ಬೆನ್ನಲ್ಲೇ, ಇದೀಗ ಮತ್ತೊಂದು ಅಚ್ಚರಿಯ ಬೆಳವಣಿಗೆ ನಡೆದಿದೆ. ಸಂತೇಪೇಟೆಯಲ್ಲಿನಡೋಪ್ಲಿನ್ ಕಾಂಪ್ಲೆಕ್ಸ್' ತೆರವು ಕುರಿತು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ನೀಡಿರುವ ಗಡುವು ನಮಗೆ ಸಂಬಂಧಿಸಿದ್ದಲ್ಲ ಎಂದು ಕಾಂಪ್ಲೆಕ್ಸ್ ಅಸೋಸಿಯೇಷನ್ ಅಧ್ಯಕ್ಷ ಗಿರೀಶ್ ಸ್ಪಷ್ಟಪಡಿಸಿದ್ದಾರೆ.

ಗುರುವಾರ ಬೆಳಗ್ಗೆ ಕಾಂಪ್ಲೆಕ್ಸ್ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಕಾನೂನು ತಜ್ಞರಿಗೆ ಹೈಕೋರ್ಟ್ ತೀರ್ಪಿನ ಪ್ರತಿ ನೀಡಿ ಪರಿಶೀಲನೆ ಮಾಡಿಸಿಕೊಂಡಿದ್ದೇವೆ. ಅವರಿಂದ ವಸ್ತು ಸ್ಥಿತಿಯನ್ನು ಮನದಟ್ಟು ಮಾಡಿಕೊಂಡ ನಂತರ ವರ್ತಕರ ಅಸೋಸಿಯೇಷಸನಲ್ಲಿ ಈ ಕುರಿತು ಚರ್ಚೆ ಮಾಡಿದ್ದೇವೆ ಎಂದರಲ್ಲದೇ, ನಮ್ಮ ಕಾನೂನು ತಜ್ಞರ ಸಲಹೆಯನ್ನು ಪರಿಗಣಿಸಿ, ಈ ವಿಚಾರವಾಗಿ ವರ್ತಕರು ಯಾರೂ ಕೂಡ ಆತಂಕಗೊಳ್ಳಬಾರದೆಂದು ತೀರ್ಮಾನ ಕೈಗೊಂಡಿದ್ದೇವೆ ಎಂದು ತಿಳಿಸಿದರು.

ಇಲ್ಲಿರುವವರೆಲ್ಲಾ 1980ನೇ ಇಸವಿಯಲ್ಲಿ ಈ ಸ್ಥಳ ಹಂಚಿಕೆಯಾಗದಿನಿಂದ ಹಿಡಿದು ಇಲ್ಲಿಯವರೆಗೂ ಎಲ್ಲರೂ ಕ್ರಯಪತ್ರ ಮಾಡಿಸಿಕೊಂಡು ಮೂಲ ಮಾಲೀಕರೇ ಆಗಿರುತ್ತಾರೆ. ಪ್ರತಿವರ್ಷ ಕಂದಾಯವನ್ನೂ ಕಟ್ಟಿದ್ದೇವೆ. ಹೀಗಾಗಿ ಇಲ್ಲಿ ಬಾಡಿಗೆದಾರರು ಎಂದು ಬಳಸಿರುವುದು ತಪ್ಪು ಮಾಹಿತಿ. ನಾವು ಮಾಲೀಕರೇ ಹೊರತು ಬಾಡಿಗೆದಾರರಲ್ಲ. ಡ್ಯೂಪ್ಲೀನ್ ಕಾಂಪ್ಲೆಕ್ಸ್ ಎಂದು ಹೆಸರು ಬಂದ ಮೇಲೆ ನಮ್ಮ ಮಾರ್ಕೆಟ್ ರೆಪ್ಯುಟೇಷನ್ ಹಾಳಾಗಿದೆ. ನಮ್ಮ ಬಳಿ ವ್ಯವಹಾರ ಮಾಡಬೇಕೆಂದವರು ಒಂದು ಬಾರಿ ಯೋಚನೆ ಮಾಡುವ ಪರಿಸ್ಥಿತಿ ಉಂಟಾಗಿದೆ ಎಂದು ಹೇಳಿದರು.

ಡೋಪ್ಲಿನ್ ಕಾಂಪ್ಲೆಕ್ಸ್‌ನಲ್ಲಿರುವ 51 ಅಂಗಡಿಗಳಲ್ಲಿ ಶೇಕಡ 70ರಷ್ಟು ವರ್ತಕರು ಅಂದಿನ ಮುಡಾಗೆ ಹಣ ಪಾವತಿಸಿ ನೋಂದಣಿ ಮಾಡಿಸಿಕೊಂಡು ಟೈಟಲ್ ಡೀಡ್ ಕೂಡ ಪಡೆದಿದ್ದೇವೆ. ಹೈಕೋರ್ಟ್ ನೀಡಿರುವ ತೀರ್ಪಿನ ಪ್ರತಿಯನ್ನು ನಮ್ಮ ಕಾನೂನು ತಜ್ಞರಿಗೆ ತೋರಿಸಿ ಪರಿ ಶೀಲನೆ ನಡೆಸಿದ್ದೇವೆ. ಉಚ್ಚ ನ್ಯಾಯಾಲಯದ ತೀರ್ಪಿಗೂ ನಿಮಗೂ ಯಾವುದೇ ಸಂಬಂಧವಿಲ್ಲ ನೀವು ನಿಶ್ಚಿಂತೆಯಿಂದ ಇರಿ ಎಂದು ಅವರು ಸಲಹೆ ನೀಡಿದ್ದಾರೆ ಎಂದರು. ಇಲ್ಲಿ ಶಾಪಿಂಗ್ ಕಾಂಪ್ಲೇಕ್ಸ್ ಮಾಡಿದರೆ ಪಾರ್ಕಿಂಗ್ ವ್ಯವಸ್ಥೆ ಮಾಡಲು ಆಗುತ್ತದೆಯೇ? ಎಂದು ಪ್ರಶ್ನಿಸಿದ ಅವರು, ಇಲ್ಲಿ ನಾವು ಮೂಲ ಮಾಲೀಕರು. ನಮಗೆ ಇಲ್ಲಿ ಎಲ್ಲಾ ಹಕ್ಕುಗಳಿವೆ. ಹಾಗಾಗಿ ಇಲ್ಲಿ ಕಾಂಪ್ಲೆಕ್ಸ್ ಹೇಗೆ ಮಾಡುತ್ತಾರೆ ಎಂದು ಮರು ಪ್ರಶ್ನಿಸಿದರು.

ಡೋಪ್ಲಿನ್ ಕಾಂಪ್ಲೆಕ್ಸ್ ಬಾಡಿಗೆದಾರರನ್ನು ಮಾರ್ಚ್ ಮೊದಲ ವಾರದಲ್ಲಿ ತೆರವು ಮಾಡಿಸುತ್ತೇವೆ ಎಂದು ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಮಾಧ್ಯಮಗಳಿಗೆ ನೀಡಿರುವ ಹೇಳಿಕೆಯಿಂದ ಸಹಜವಾಗಿಯೇ ನಮ್ಮ ವರ್ತಕರು ಈ ಮೊದಲು ಆತಂಕಗೊಂಡಿದ್ದರು. ಅಲ್ಲದೆ ಅಂಗಡಿ ಮಾಲೀಕರಾಗಿರುವ ನಮ್ಮನ್ನು ಹೇಗೆ ತೆರವು ಗೊಳಿಸುತ್ತಾರೆ ಎಂಬ ಗೊಂದಲ ಕೂಡ ಕಾಡಿತು. ಈ ವಿಚಾರದ ಖಚಿತತೆ ಪಡೆಯಲು ನಿನ್ನೆ ನಮ ಕೆಲವು ವರ್ತಕರು ಎಂಡಿಎ ಕಚೇರಿಗೆ ಹೋದಾಗ ಅಲ್ಲಿನ ಅಧಿಕಾರಿಗಳು ಯಾವುದೇ ಸ್ಪಷ್ಟನೆ ನೀಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.ಆದರೆ ಈಗ ನಮ್ಮ ಕಾನೂನು ತಜ್ಞರು ನೀಡಿರುವ ಸಲಹೆಯಿಂದ ನಾವು ನಿರಾಂತ ಕವಾಗಿದ್ದೇವೆ. ಎಂಡಿಎ ನೀಡಿರುವ ಗುಡುವು ನಮಗೆ ಸಂಬಂಧಪಟ್ಟಿದ್ದಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದು, ನಾವೆಲ್ಲಾ ಎಂದಿನಂತೆ ವ್ಯಾಪಾರ ದಲ್ಲಿ ತೊಡಗಿದ್ದೇವೆ ಎಂದು ಗಿರೀಶ್ ತಿಳಿಸಿದರು.

ಅಸೋಸಿಯೇಷಸನ ಮತ್ತೋರ್ವರಾದ ಸುದೀಪ್ ಅವರು ಮಾತನಾಡಿ, ಅರ್ಜಿದಾರರಾದ ವಿವೇಕಾನಂದವರಿಗೂ ಇಲ್ಲಿಗೂ ಯಾವುದೇ ಸಂಬಂಧವಿಲ್ಲ.

ಡ್ಯೂಪ್ಲೀನ್ ಕಾಂಪ್ಲೆಕ್ಸ್‌ನಲ್ಲಿ ಇರುವವರಲ್ಲಿ ಶೇ.75 ರಷ್ಟು ಮೂಲ ಮಾಲೀಕರು. ಇಲ್ಲಿಯ ವರನ್ನು ಬಾಡಿಗೆದಾರರು ಎಂದು ಬಿಂಬಿಸುತ್ತಿದ್ದಾರೆ. ದಾಖಲೆಗಳ ಪ್ರಕಾರ ಒಂದು ಭಾಗಕ್ಕೆ ಭಕ್ಷಿ ಬಸಪ್ಪಾಜಿ ಅರಸ್ ಅನ್ನುವವರಿಗೆ ಬಾಡಿಗೆ ಕಟ್ಟುತ್ತಿದ್ದೇವು, ಇನ್ನೊಂದು ಭಾಗ ಮನ್ನಾರ್ಸ್ ಎಂಪೊರಿಯಂ ಅವರದ್ದು. ಮತ್ತೊಂದು ಭಾಗ ಭಾವಸಾರ್ ಸೈಕಲ್ ಅವರದ್ದು. ಸಿಐಟಿಬಿ ಅವರು ಇವರಿಂದ ಖರೀದಿ ಮಾಡಿ ಹಂಚಿಕೆ ಮಾಡುತ್ತೇವೆ ಎಂದಿದ್ದರು ಹಾಗೂ ಮಹಾರಾಜರ ಆಜ್ಞೆ ಮೇರೆಗೆ ತುಂಬಾ ಹಳಯವರಿಗೆ ಜಾಗ ನೀಡಲಾಯಿತು ಎಂದರು. ಉಪಾಧ್ಯಕ್ಷ ಜಗದೀಶ್, ಖಜಾಂಚಿ ಎನ್.ಹರ್ಷ, ಕಾರ್ಯದರ್ಶಿ ಶ್ರೀನಿವಾಸನ್ ಸೇರಿದಂತೆ ಇತರರಿದ್ದರು.

ಯುವ ಮಾರ್ಗ

www.yuvamarga.com Yuva Marga yuva_marga_

# ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಸ್ವಾಮೀಜಿಯವರ ಆರೋಗ್ಯ ವಿಚಾರಿಸಿದ ಕೆ.ಶಿವನಗೌಡ ನಾಯಕ





ಯುವಮಾರ್ಗ ಸುದ್ದಿ

**ರಾಯಚೂರು,ಫೆ.20–** ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಪೀಠಾಧಿಪತಿ ಶ್ರೀ ಪ್ರಸನ್ನಾನಂದ ಪುರಿ ಮಹಾಸ್ವಾಮೀಜಿ ಅವರ ಆರೋಗ್ಯ ಸ್ಥಿತಿ ಕುರಿತು ವಿಚಾರಿಸಲು ಮಾಜಿ ಸಚಿವರಾದ ಕೆ. ಶಿವನಗೌಡ ನಾಯಕ ಅವರು ಹೈದರಾಬಾದ್‌ನ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ ಸ್ವಾಮೀಜಿಯವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಶಿವನಗೌಡ ನಾಯಕ ಅವರು, ಪೂಜ್ಯ ಶ್ರೀಗಳಿಗೆ ಹೃದಯ ಸಂಬಂಧಿತ ಮೊದಲ ಹಂತದ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿದ್ದು, ಅವರು ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು. ವೈದ್ಯರ ತಂಡವು ಸ್ವಾಮೀಜಿಯವರ ಆರೋಗ್ಯವನ್ನು ನಿಕಟವಾಗಿ ಗಮನಿಸುತ್ತಿದ್ದು, ಚಿಕಿತ್ಸೆ ಉತ್ತಮವಾಗಿ ಪ್ರತಿಕ್ರಿಯಿಸುತ್ತಿದೆ ಎಂದರು. ಕರ್ನಾಟಕದಾದ್ಯಂತ ಇರುವ ಭಕ್ತಾಧಿಗಳು ಯಾವುದೇ ರೀತಿಯ ಆತಂಕ ಪಡುವ ಅಗತ್ಯವಿಲ್ಲವೆಂದು ಸ್ಪಷ್ಟಪಡಿಸಿದರು.

ಪ್ರಸ್ತುತ ವೈದ್ಯರು ಸ್ವಾಮೀಜಿಯವರಿಗೆ ಸಂಪೂರ್ಣ ವಿಶ್ರಾಂತಿ ಅಗತ್ಯವಿದೆ ಎಂದು ಸೂಚಿಸಿದ್ದು, ಮುಂದಿನ ಎರಡನೇ ಹಂತದ ಶಸ್ತ್ರಚಿಕಿತ್ಸೆಗೆ ಇನ್ನೂ ಎರಡು ದಿನಗಳ ಕಾಲಾವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ಸೋಂಕು ನಿವಾರಣೆ ಹಾಗೂ ಶಾರೀರಿಕ ಸ್ಥಿತಿ ಸ್ಥಿರವಾಗಿರುವುದನ್ನು ಖಚಿತಪಡಿಸಿ ಕೊಳ್ಳಲು ಕಟ್ಟುನಿಟ್ಟಿನ ವೈದ್ಯಕೀಯ ಕ್ರಮಗಳನ್ನು ಅನುಸರಿಸಲಾಗುತ್ತಿದೆ ಎಂದು ತಿಳಿಸಿದರು.

ಭಕ್ತಾಧಿಗಳು ಆಸ್ಪತ್ರೆಗೆ ಭೇಟಿ ನೀಡುವ ಪ್ರಯತ್ನ ಮಾಡಬಾರದು, ವೈದ್ಯರ ಸಲಹೆಗಳನ್ನು ಗೌರವಿಸಿ ಸಹಕರಿಸಬೇಕು ಎಂದು ಮನವಿ ಮಾಡಿದರು. ಸ್ವಾಮೀಜಿಯವರ ಆರೋಗ್ಯ ಶೀಘ್ರ ಚೇತರಿಕೆಗೆ ಎಲ್ಲರೂ ಪ್ರಾರ್ಥನೆ ಸಲ್ಲಿಸಬೇಕು ಎಂದು ಅವರು ವಿನಂತಿಸಿದರು.

ರಾಜ್ಯದ ವಿವಿಧ ಭಾಗಗಳಿಂದ ದೂರವಾಣಿ ಮೂಲಕ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಸ್ವಾಮೀಜಿಯವರ ಆರೋಗ್ಯ ವಿಚಾರಣೆ ನಡೆಯುತ್ತಿದ್ದು, ಭಕ್ತರಲ್ಲಿ ಅಪಾರ ಕಾಳಜಿ ವ್ಯಕ್ತವಾಗಿದೆ.

ಪೂಜ್ಯ ಶ್ರೀಗಳು ಶೀಘ್ರ ಗುಣಮುಖರಾಗಿ ಪುನಃ ಧಾರ್ಮಿಕ ಹಾಗೂ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲಿ ಎಂಬುದು ಎಲ್ಲರ ಹಾರೈಕೆಯಾಗಿದೆ.

ನಮ್ಮ ವಾಲ್ಮೀಕಿ ಸಮಾಜದ ಹಿರಿಯರೆಲ್ಲರ ಅಭಿಪ್ರಾಯದಂತೆ ಎಲ್ಲಾರ ಜೊತೆಗೆ ಸಮಾಲೋಚನೆ ಮಾಡಿ ಸಚಿವರು, ಮಾಜಿ ಸಚಿವರು, ಶಾಸಕರು,ಮಾಜಿ ಶಾಸಕರನ್ನ ಸಂಪರ್ಕಿಸಿ ಎಲ್ಲರ ಆಶಯದಂತೆ ಹೆಚ್ಚಿನ ಚಿಕಿತ್ಸೆ ಕೊಡಿಸುವ ಸಂಬಂಧ ಹೈದರಾಬಾದ್ ಆಸ್ಪತ್ರೆಗೆ ಪೂಜೆ ಸ್ವಾಮೀಜಿಯವರನ್ನು ಕರೆತರಲಾಗಿದೆ ಎಂದು ಮಾಜಿ ಸಚಿವರಾದ ಶಿವನಗೌಡ ನಾಯಕ ತಿಳಿಸಿದರು.

# ಶಾಸಕ ದದ್ದಲ್ ಬಸನಗೌಡರಿಂದ ರಾಯಚೂರು ಗ್ರಾಮಾಂತರ ನೂತನ ಕಟ್ಟಡ ನಾಲ್ಕು ಶಾಲಾ ಕೊಠಡಿಗಳ ಉದ್ಘಾಟನೆ ಸಮಾರಂಭ

ಯುವಮಾರ್ಗ ಸುದ್ದಿ

**ಗಿಲ್ಲೆಸೂಗೂರು,ಫೆ.20**–ಗುರುವಾರದಂದು ಗಿಲ್ಲೆಸೂಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಮನಗರ ನಾಲ್ಕು ಶಾಲಾ ಕೊಟ್ಟಡಿಗಳು 60 ಲಕ್ಷ ವೆಚ್ಚ ನೂತನ ಕಟ್ಟಡ ಶ್ರೀ ಮಾನ್ಯ ದದ್ದಲ್ ಬಸನಗೌಡ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಬೆಂಗಳೂರು ಇವರ ನೇತೃತ್ವದಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನಾಲ್ಕು ಶಾಲಾ ಕೊಠಡಿಗಳನ್ನು ಉದ್ಘಾಟನೆ ಅಚ್ಚುಕಟ್ಟಾಗಿ ಮಾಡಲಾಯಿತು ಶಾಲಾ ಮುದ್ದು ಮಕ್ಕಳು ಊರಿನ ಹಿರಿಯರು ಸೇರಿದಂತೆ ಹಾಗೂ ಶಾಲಾ ಭೂ ದಾನಿಗಳಾದ ಶ್ರೀ ರಮೇಶ್ ರೆಡ್ಡಿ ಅವರಿಗೆ ಶಾಸಕರಿಂದ ಗೌರವ ಮತ್ತು ಅಭಿನಂದನೆಗಳನ್ನು ಸಲ್ಲಿಸಿದರು ಈ ಸಂದರ್ಭದಲ್ಲಿ ಶಾಸಕ ಶ್ರೀಮಾನ್ಯ ದದ್ದಲ್ ಬಸನಗೌಡ ಮಾತನಾಡಿದರು ಕಾಂಗ್ರೆಸ್ ಪಕ್ಷದ ಮುಖಂಡರು



ಶ್ರೀ ಜನಾರ್ದನ್ ರೆಡ್ಡಿ ಗೌಡ ಅಂಚಿನಾಳ್ ಶ್ರೀ ಶಿವಪ್ಪ ನಾಯಕ ಶ್ರೀ ಮುಕ್ಕಣ್ಣ ಶ್ರೀ ನಜೀರ್ ಸಾಬ್ ಗಿಲ್ಲೆಸೂಗುರು ಕಂದಾಯ ಇಲಾಖೆಯ ವಾಜೇಂದ್ರ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು ವಿವಿಧ ಹಳ್ಳಿಗಳಿಂದ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು ಮತ್ತು ಶಾಲಾ ಎಸ್ ಡಿ ಎಂ ಸಿ ಸದಸ್ಯರುಗಳು ರಾಮನಗರ ಊರಿನ ಯುವಕರು ಮಹಿಳೆಯರು ಸೇರಿದಂತೆ ರಾಮನಗರ ಶಾಲೆಯ ಶಿಕ್ಷಕಿ ಮುಖ್ಯಗುರು ಶ್ರೀಮತಿ ಚಂದ್ರಕಲಾ ಮತ್ತು ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ ಗಿಲ್ಲೆಸೂಗೂರು ಮುಖ್ಯ ಗುರುಗಳಾದ ಶ್ರೀ ಈಶ್ವರಯ್ಯ ಸರ್ ಶ್ರೀ ಕೃಷ್ಣಮೂರ್ತಿ ಸಿಆರ್‌ಪಿ ಸಾರ್ ಅವರು ನಿರೂಪಣೆ ಮಾಡಿ ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು

# ಕನ್ನಡ ಭವನದಲ್ಲಿ 13ನೇ ಕಲಬುರಗಿ ಚಿತ್ರಸಂತೆ

**ಕಲಬುರಗಿ:ಫೆ20:**ಚಿತ್ರಕಲಾಕೃತಿಗಳು ಜನಸಾಮಾನ್ಯರಿಗೆ ತಲಪುವಂತೆ ಮಾಡಬೇಕೆನ್ನುವ ದೆಸೆಯಲ್ಲಿ ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗ ದೊಂದಿಗೆ ಹಾಗೂ ವಿಕಾಸ ಅಕಾಡೆಮಿ, ಚೈತನ್ಯಮಯಿ ಟ್ರಸ್ಟ್, ದಿ ಆರ್ಟ ಇಂಟಿಗ್ರೇಶನ್ ಸೊಸೈಟಿ, ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ, ಬಿಸಿಲು ಆರ್ಟ್ ಗ್ಯಾಲರಿ, ರೋಟರಿ ಕ್ಲಬ್ ಆಫ್ ಗುಲಬರ್ಗಾ ನಾರ್ಥ್, ಸರ್ವಜ್ಞ ಮತ್ತು ಜಸ್ಟಿಸ್ ಶಿವರಾಜ ಪಾಟೀಲ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ ಇವುಗಳ ಸಹಕಾರದೊಂದಿಗೆ ಕಲ್ಯಾಣ ಕರ್ನಾಟಕದ ಪ್ರಮುಖ ವಾಣಿಜ್ಯ ಕೇಂದ್ರವಾದ ಕಲಬುರಗಿ ನಗರದ ಕನ್ನಡ ಭವನದಲ್ಲಿ 22–02–2026 ಭಾನುವಾರದಂದು ಒಂದು ದಿನದ 13ನೇ ಕಲಬುರಗಿ ಚಿತ್ರಸಂತೆಯನ್ನು ಆಯೋಜಿಸಲಾಗಿದೆ. ಹಿರಿಯ ಚಿತ್ರಕಲಾವಿದರು, ಯುವ ಚಿತ್ರಕಲಾವಿದರು ಮತ್ತು ಕಲಾವಿದ್ಯಾರ್ಥಿಗಳು ಸುಮಾರು 1500ಕ್ಕೂ ಹೆಚ್ಚು ವಿವಿಧ ಮಾಧ್ಯಮದ ಚಿತ್ರಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ. ಕಲ್ಯಾಣ ಕರ್ನಾಟಕ ಪ್ರದೇಶದ ವಿವಿಧ ಮತ್ತು ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 125ಕ್ಕೂ ಹೆಚ್ಚು ಕಲಾವಿದರು ಕಲಾ ಮಳಿಗೆಯನ್ನು ಹಾಕಲಿದ್ದಾರೆ.

ಈ ಕಲಬುರಗಿ ಚಿತ್ರಸಂತೆಯಲ್ಲಿ ಪ್ರದರ್ಶನಗೊಳ್ಳಲಿರುವ ನಿಸರ್ಗಚಿತ್ರ, ಅಮೂರ್ತಚಿತ್ರ, ನೈಜಶೈಲಿಯ ಚಿತ್ರಗಳು, ಗ್ರಾಫಿಕ್ ಮಾಧ್ಯಮದ ಕಲಾಕೃತಿಗಳು, ಸಂಪ್ರದಾಯ ಶೈಲಿಯ ಚಿತ್ರಗಳು, ಕೋಲಾಜ್ ಮಾಧ್ಯಮದ ಚಿತ್ರಗಳು ಮತ್ತು ಶಿಲ್ಪಕಲಾಕೃತಿಗಳು ಹೀಗೆ ದೃಶ್ಯಕಲೆಯ ವಿವಿಧ ಪ್ರಕಾರದ ಕಲಾಕೃತಿಗಳನ್ನು ನಗರದ ವಾಣಿಜ್ಯೋದ್ಯಮಿಗಳು, ವೈದ್ಯರು, ಇಂಜಿನೀಯರಗಳು, ವಾಸ್ತುಶಿ ಲ್ಪಿಗಳು ಮತ್ತು ಹೋಟೆಲ್ ಉದ್ಯಮಿಗಳಲ್ಲದೇ ಜನಸಾಮಾನ್ಯರು ಕೂಡಾ ಅತ್ಯಂತ ಕಡಿಮೆ ಬೆಲೆಗಳಲ್ಲಿ ತಮಗೆ ಇಷ್ಟವಾದ ಚಿತ್ರಕಲಾಕೃತಿಗಳನ್ನು ಖರೀದಿಸಿ ತಮ್ಮ ಮನೆಯ ಗೋಡೆಯ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

ಈ ಕಲಬುರಗಿ ಚಿತ್ರಸಂತೆಯಲ್ಲಿ ನೂರು ರೂಪಾಯಿಗಳಿಂದ ಹಿಡಿದು ಒಂದು ಲಕ್ಷ ರೂಪಾಯಿಗಳವರೆಗಿನ ಬೆಲೆಯ ಕಲಾಕೃತಿ ಗಳು ಇರುತ್ತವೆ. ಜೊತೆಗೆ ಚಿತ್ರಸಂತೆ ನಡೆಯುವ ಸ್ಥಳದಲ್ಲಿ ಭಾವಚಿತ್ರ ರಚಿಸುವ ಚಿತ್ರಕಲಾವಿದರು ಇರುವುದರಿಂದ ನಿಮ್ಮದೇ ಭಾವಚಿತ್ರವನ್ನು ರಚಿಸಿಕೊಂಡು ಸಂತೋಷ ಪಡಬಹುದು ಒಟ್ಟಾ ರೆ ಸಾವಿರಾರು ಕಲಾವಿದರು ಕಲಾಸಕ್ತರು ಮತ್ತು ಕಲಾಪೋಷಕರ ’ನ್ನು ಒಂದೆಡೆ ಸೇರಿಸುವ ಈ ಚಿತ್ರಸಂತೆ ಒಂದು ದಿನದ ಮಟ್ಟಿಗೆ ನಗರದ ಕನ್ನಡ ಭವನದಲ್ಲಿ ಹಬ್ಬದ ವಾತಾವರಣವನ್ನು ಸೃಷ್ಟಿಸಿ ಸಾರ್ವಜನಿಕರಲ್ಲಿ ಕಲಾಭಿಮಾನ ಬೆಳಸಲಿದೆ. ಸಾಮಾನ್ಯವಾಗಿ ದೊಡ್ಡ ದೊಡ್ಡ ಮೇಟ್ರೊ ನಗರಗಳಲ್ಲಿ ನಡೆಯುವ ಕಲಾಮೇಳಗಳು, ಪ್ರತಿಷ್ಠಿತ ಕಲಾಗ್ಯಾಲರಿಗಳಲ್ಲಿ ನಡೆಯುವ ಪ್ರದರ್ಶನಗಳು ತುಂಬಾ ಕಮರ್ಷಿಯಲ್ ಆಗಿರುತ್ತವೆ. ಅಲ್ಲಿ ಜನಸಾಮಾನ್ಯರು ಚಿತ್ರಕಲಾಕೃತಿಗಳನ್ನು ಖರೀದಿಸಲು ಮತ್ತು ಕಲಾಕೃತಿಗಳನ್ನು ವೀಕ್ಷಿಸಲು ಸಾಧ್ಯವಾಗುವದಿಲ್ಲ ಆದರೆ ಕಲಬುರಗಿಯಲ್ಲಿ ನಡೆಯುತ್ತಿರುವ ಈ ಚಿತ್ರಸಂತೆಗೆ ಅದ್ಯಾವುದರ ಸೋಂಕಿರಲ್ಲ. ಕೇವಲ ಶ್ರೀಮಂತರು ಮತ್ತು ವಾಣಿಜ್ಯ ಕಲಾಗ್ಯಾಲರಿಗಳವರು ಮಾತ್ರ ಉತ್ತಮವಾದ ಚಿತ್ರಕಲಾಕೃತಿಗಳನ್ನು ಖರೀದಿಸಬಹುದು ಎಂಬ ಅಪವಾದವನ್ನು ಸುಳ್ಳು ಮಾಡಿ ಶ್ರೀಸಾಮಾನ್ಯನಿಗೂ ಕೈಗೆಟುಕುವ ದರಗಳಲ್ಲಿ ದೊರೆಯಲ್ಲಿ ಎಂಬುದೇ ಈ ಕಲಬುರಗಿ ಚಿತ್ರಸಂತೆಯ ಮುಖ್ಯ ಉದ್ದೇಶವಾಗಿದೆ.

ಈ ಹಿಂದಿನ ಚಿತ್ರಸಂತೆಗಳಲ್ಲಿ ಸಿಕ್ಕಿರುವ ಅಭೂತಪೂರ್ವ ಪ್ರತಿಕ್ರಿಯೆಯ ಹಿನ್ನೆಲೆಯಲ್ಲಿ ಹೆಚ್ಚಿನ ಪ್ರೇರಣೆ ಹಾಗೂ ಪ್ರೋತ್ಸಾಹ ಪಡೆದು, 13ನೇ ಕಲಬುರಗಿ ಚಿತ್ರಸಂತೆಯನ್ನು ಇನ್ನೂ ಉತ್ತಮ ರೀತಿಯಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಇದೇ ಸಂದರ್ಭದಲ್ಲಿ ಮಕ್ಕಳಲ್ಲಿ ದೃಶ್ಯಕಲಾ ಪ್ರಜ್ಞೆಯನ್ನು ಬೆಳೆಸಲು ಚಿಕ್ಕಮಕ್ಕಳ ಚಿತ್ರಕಲಾ ಸ್ಪರ್ಧೆ ಮತ್ತು ಕುಂಭ ಕಲೆಯ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಸುಮಾರು 500 ಕ್ಕೂ ಹೆಚ್ಚು ಶಾಲಾ ಮಕ್ಕಳು ಭಾಗವಹಿಸುವ ನಿರೀಕ್ಷೆ ಇದೆ.

ಈ ಕಲಬುರಗಿ ಚಿತ್ರಸಂತೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಾದ ಫೌಜಿಯಾ ತರನ್ನುಮ್ ಬಿ. ಅವರು ಉದ್ಘಾಟಿಸಲಿದ್ದು, ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಕಲಬುರಗಿ ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀಮತಿ ವರ್ಷಾ ರಾಜೀವ ಜಾನೆ ಅವರು ಉದ್ಘಾಟಿಸಲಿದ್ದಾರೆ, ಮಾಜಿ ಸಂಸದರಾದ ಶ್ರೀ ಬಸವರಾಜ ಪಾಟೀಲ ಸೇಡಂ ಅವರು ಗೌರವ ಉಪಸ್ಥಿತಿ ವಹಿಸಲಿದ್ದು ಮುಖ್ಯ ಅತಿಥಿಗಳಾಗಿ ಕಲಬುರಗಿ ಗ್ರಾಮೀಣ ಮತಕ್ಷೇತ್ರದ ಶಾಸಕರಾದ ಶ್ರೀ ಬಸವರಾಜ ಮತ್ತಿಮಡು, ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶರಣಬಸಪ್ಪ ಪಪ್ಪಾ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬಸವರಾಜ ಎಲ್ ಜಾನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕರಾದ ಶ್ರೀಮತಿ ಜಗದೀಶ್ವರಿ ಅ ನಾಶಿ, ರೋಟರಿ ಕ್ಲಬ್ ಆಫ್ ಗುಲಬರ್ಗಾ ನಾರ್ಥನ ಅಧ್ಯಕ್ಷರಾದ ಶ್ರೀ ಆನಂದ ದಂಡೋತಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ವಿಜಯಕುಮಾರ ಪಾಟೀಲ್ ತೇಗಲತಿಪ್ಪಿ ಮತ್ತು ವಾಣಿಜ್ಯೋದ್ದಿಮಿ ಶ್ರೀ ರಾಧೇಶ್ಯಾಮ ಠಾಕೂರ ಅವರು ಭಾಗವಹಿಸಲಿದ್ದಾರೆ. ಚೈತನ್ಯಮಯಿ ಟ್ರಸ್ಟನ ನಿರ್ದೇಶಕ ಮತ್ತು ಹಿರಿಯ ಚಿತ್ರಕಲಾವಿದರಾದ ಡಾ. ಎ.ಎಸ್. ಪಾಟೀಲ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

**ಸಾಂಸ್ಕೃತಿಕ ಕಾರ್ಯಕ್ರಮಗಳು, ಕಾರ್ಯಾಗಾರ ಮತ್ತು ಪ್ರಾತ್ಯಕ್ಷತೆಗಳು:**

ಪುಷ್ಪಹಸ್ತ ನೃತ್ಯ ಕಲಾ ಕೇಂದ್ರದ ಕಲಾವಿದರಿಂದ ಭರತನಾಟ್ಯ ಪ್ರದರ್ಶನ, ಶ್ರೀ ಸಂಗಯ್ಯ ಹಳ್ಳದಮಠ ಮತ್ತು ತಂಡದವರಿಂದ ರಂಗಗೀತೆ, ತತ್ವಪದಗಳು ಮತ್ತು ಪರಿಸರ ಗೀತೆಗಳ ಪ್ರಸ್ತುತಿ ಹಾಗೂ ಅಂತರಂಗ ಸಾಂಸ್ಕೃತಿಕ ಕಲಾ ಸಂಘದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಶಿಲ್ಪಕಲಾವಿದ ದಾನಯ್ಯ ಚೌಕಿಮಠ ಅವರಿಂದ ಕುಂಭಕಲೆ ಪ್ರಾತ್ಯಕ್ಷತೆ ಮತ್ತು ಕಾರ್ಯಾಗಾರ, ಶಿಲ್ಪಕಲಾವಿದ ಗೋಪಾಲ ಕೆ.ಪಿ. ಅವರಿಂದ ಭಾವಶಿಲ್ಪ ಪ್ರಾತ್ಯಕ್ಷತೆ, ಚಿತ್ರಕಲಾವಿದ ಗಿರೀಶ ಬಿ ಕುಲಕರ್ಣಿ ಅವರು ಸೃಜನಶೀಲ ವರ್ಣಚಿತ್ರ ಪ್ರಾತ್ಯಕ್ಷತೆ ನಡೆಸಿಕೊಡಲಿದ್ದಾರೆ.

ಡಾ. ಎ.ಎಸ್. ಪಾಟೀಲ ವಿ.ಬಿ. ಬಿರಾದಾರ ಎಂ.ಎಚ್. ಬೆಳಮಗಿ ಡಾ. ಪರಶುರಾಮ ಪಿ. ಸಂಯೋಜಕರು 13ನೇ ಕಲಬುರಗಿ ಚಿತ್ರಸಂತೆ ತಿಳಿಸಿದ್ದಾರೆ.

# ಡಿಸ್ಲಡ್ಜಿಂಗ್ ವಾಹನಗಳ ಕಡ್ಡಾಯ ನೋಂದಣಿಗೆ ಸೂಚನೆ

**ರಾಯಚೂರು,ಫೆ.20–** ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಖಾಸಗಿ ಸೆಪ್ಟಿಕ್ ಟ್ಯಾಂಕ್ ವಾಹನಗಳು ಅನಧಿಕೃತವಾಗಿ ಸ್ವಚ್ಛಮಾಡುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ, ಖಾಸಗಿ ಡಿಸ್ಲಡ್ಜಿಂಗ್ ವಾಹನಗಳ ಮಾಲೀಕರು ರಾಯಚೂರು ಮಹಾನಗರ ಪಾಲಿಕೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ. ತಪ್ಪಿದ್ದಲ್ಲಿ, ಮಹಾನಗರ ಪಾಲಿಕೆ ಅಧಿನಿಯಮ 1976 ರ ಪ್ರಕಾರ ಕ್ರಮ ಕೈಗೊಳ್ಳುವುದಲ್ಲದೇ ಮತ್ತು ಪ್ರೊಹಿಬಿಷನ್ ಆಫ್ ಎಂಪ್ಲಾಯಮೆಂಟ್ ಆಸ್ ಮ್ಯಾನುವಲ್ ಸ್ಕ್ಯಾವೆಂಜರ್ಸ್ ಅಂಡ್ ಥೇರ್ ರಿಹ್ಯಾಬಿಟೇಶನ್ ಆಕ್ಟ್ –2023 (Prohibition of employment as manual scavengers and their rehabilitation act 2013) ರಡಿ ತಮ್ಮ ಮೇಲೆ ಕಾನೂನು ರೀತ್ಯಾ ಕಠಿಣ ಕ್ರಮ ಜರುಗಿಸಲಾಗುವುದು ಮತ್ತು ಪಾಲಿಕೆಯ ಡಿಸ್ಲಡ್ಜಿಂಗ್ ವಾಹನಗಳು ಅಥವಾ ಪಾಲಿಕೆಯಿಂದ ನೋಂದಾಯಿತ ಡಿಸ್ಲಡ್ಜಿಂಗ್ ವಾಹನಗಳಿಂದ ಮಾತ್ರ ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸಿಕೊಳ್ಳಲು ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ. ಆದ್ದರಿಂದ ದಿ:23–02–2026 ರಂದು ಪಾಲಿಕೆಯ ಸಭಾಂಗಣದಲ್ಲಿ (ಹಳೆ ಜಿಲ್ಲಾಧಿಕಾರಿಗಳ ಕಛೇರಿ) ಸಮಯ ಬೆಳಗ್ಗೆ 11 ಗಂಟೆಗೆ ಡಿಸ್ಲಡ್ಜಿಂಗ್ ವಾಹನ ಮತ್ತು ದಾಖಲಾತಿಗಳೊಂದಿಗೆ ಸಭೆಗೆ ಹಾಜರಾಗಲು ಮತ್ತು ದಿ:28–02–2026 ರೊಳಗಾಗಿ ಡಿಸ್ಲಡ್ಜಿಂಗ್ ವಾಹನಗಳನ್ನು ಪಾಲಿಕೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗೃಹಲಕ್ಷ್ಮೀ ಫಲಾನುಭವಿಗಳಿಗೆ ಸದ್ಯದಲ್ಲೇ ನಾಲ್ಕನೇ ಕಂತಿನ ಅನುದಾನ

ಯುವಮಾರ್ಗ ಸುದ್ದಿ

**ರಾಯಚೂರು,ಫೆ.20–** ಗೃಹಲಕ್ಷ್ಮೀ ಯೋಜನೆಯಡಿಯಲ್ಲಿ 2025–26ನೇ ಸಾಲಿನ ನಾಲ್ಕನೇ ಕಂತಿನ ಅನುದಾನದಲ್ಲಿ ರಾಯಚೂರು ಜಿಲ್ಲೆಯ 4,37,601 ಫಲಾನುಭವಿಗಳಿಗೆ 87,53,22,000 ರೂ.ಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ರಾಯಚೂರು ಅವರ ಮೂಲಕ ಡಿಬಿಟಿ ಪ್ರಕ್ರಿಯೆ ಚಾಲ್ತಿ ಮಾಡಲಾಗಿದ್ದು, ಮುಂದಿನ ಎರಡು ಮೂರು ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಜಮಾವಾಗುತ್ತದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯ ವೇದಿಕೆಗೆ ನುಗ್ಗಿ ಯೂಥ್ ಕಾಂಗ್ರೆಸ್ ಅರೆಬೆತ್ತಲೆ ಪ್ರತಿಭಟನೆ




**ನವದೆಹಲಿ,ಫೆ.20–** ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿರುವ ಇಂಡಿಯಾ ಎಐ ಇಂಪ್ಯಾಕ್ಟ್ ಸಮಿಟ್ 2026 ಸಮಾವೇಶದ ಎರಡನೇ ಕೊನೆಯ ದಿನ ರಾಷ್ಟ್ರ ರಾಜಧಾನಿಯ ಭಾರತ ಮಂಟಪದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಟಾಪ್‌ಲೆಸ್ ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ. ಪ್ರಧಾನಮಂತ್ರಿ ವಿರುದ್ಧ ಘೋಷಣೆ ಕೂಗಿ, ಇತ್ತೀಚಿನ ಭಾರತ–ಅಮೆರಿಕಾ ವಾಣಿಜ್ಯ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ.

ಭಾರತೀಯ ಯುವ ಕಾಂಗ್ರೆಸ್ ಕಾರ್ಯಕರ್ತರು ಸಮಾವೇಶ ನಡೆಯುತ್ತಿದ್ದ ಸ್ಥಳಕ್ಕೆ ಪ್ರವೇಶಿಸಿ ಆಕ್ರೋಶ ವ್ಯಕ್ತಪಡಿಸಿದರು. ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಭಾರತದ ಸಾಧನೆಗಳನ್ನು ಪ್ರತಿಬಿಂಬಿಸುವ ಮಹತ್ವದ ವೇದಿಕೆಯಾಗಿ ಈ ಸಮಾವೇಶ ಪರಿಗಣಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸ್ ಪ್ರತಿಕ್ರಿಯಿಸಿ, ಪ್ರತಿಭಟನೆ ಕುರಿತು ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ. ನಾಲ್ಕುರಿಂದ ಐದು ಮಂದಿಯನ್ನು ವಶಕ್ಕೆ ಪಡೆದುಕೊಂಡಿದ್ದು, ಅವರು ಪ್ರವೇಶ ಪಾಸ್ ಅಥವಾ ಕ್ಯೂಆರ್ ಸಂಕೇತದ ಮೂಲಕ ಒಳಬಂದಿದೆಯೇ ಎಂಬುದರ ಪರಿಶೀಲನೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಇದಕ್ಕೆ ತೀವ್ರ ಪ್ರತಿಕ್ರಿಯೆ ನೀಡಿದ ಭಾರತೀಯ ಜನತಾ ಪಕ್ಷ ರಾಷ್ಟ್ರೀಯ ವಕ್ತಾರ ಶೆಹ್ಜಾದ್ ಪೂನವಾಲಾ, “ಕಾಂಗ್ರೆಸ್ ಪಕ್ಷಕ್ಕೆ ಎಐ ಎಂದರೆ ಆಕಾಂಕ್ಷಿ ಭಾರತ ಅಥವಾ ಕೃತಕ ಬುದ್ಧಿಮತ್ತೆ ಅಲ್ಲ, ಭಾರತ ವಿರೋಧಿ. ಇದು ಐಎನ್‌ಸಿ ಅಲ್ಲ, ಎಎನ್‌ಸಿ ದೇಶವಿರೋಧಿ ಕಾಂಗ್ರೆಸ್,” ಎಂದು ಟೀಕಿಸಿದ್ದಾರೆ. ಈ ಪ್ರತಿಭಟನೆ ಭಾರತ ಸಾಧನೆಗಳ ವಿರುದ್ಧವಾಗಿದೆಯೇ ಹೊರತು ಬಿಜೆಪಿ ಅಥವಾ ಪ್ರಧಾನಮಂತ್ರಿ ವಿರುದ್ಧವಲ್ಲ ಎಂದು ಹೇಳಿದ್ದಾರೆ.

ಮತ್ತೊಂದೆಡೆ, ಉದಯ ಭಾನು ಚಿಬ್ ಅವರು, “ಕೃತಕ ಬುದ್ಧಿಮತ್ತೆ ಸಮಾವೇಶದ ಹೊಳಪಿನ ವೇದಿಕೆಯ ಹಿಂದೆ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ಕಾರ್ಪೊರೇಟ್ ಹಿತಾಸಕ್ತಿಗಳು ರಾಷ್ಟ್ರ ಹಿತಾಸಕ್ತಿಗಳಿಗಿಂತ ಮೇಲುಗೈ ಸಾಧಿಸುತ್ತಿದ್ದರೆ ಮತ್ತು ವಿದೇಶಾಂಗ ನೀತಿಯಲ್ಲಿ ಮೃದುಭಾವ ಗೋಚರಿಸುತ್ತಿದ್ದರೆ, ಪ್ರತಿಭಟನೆ ನಮ್ಮ ಕರ್ತವ್ಯ. ‘ಸಮ್ಮತಿ ಪ್ರಧಾನಮಂತ್ರಿ’ ವಿರುದ್ಧ ಧ್ವನಿ ಎತ್ತುವುದು ನಮ್ಮ ಹಕ್ಕು,” ಎಂದು ಹೇಳಿದ್ದಾರೆ.

ಇದಕ್ಕೂ ಮೊದಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾರತ–ಅಮೆರಿಕಾ ವಾಣಿಜ್ಯ ಒಪ್ಪಂದವನ್ನು ಟೀಕಿಸಿ, ಈ ಒಪ್ಪಂದದಿಂದ ಭಾರತೀಯ ರೈತರಿಗೆ ದ್ರೋಹವಾಗುತ್ತಿದೆ ಎಂದು ಆರೋಪಿಸಿದ್ದರು. ದೇಶದ ಕೃಷಿಯ ಭವಿಷ್ಯಕ್ಕೂ ಇದು ಸಂಬಂಧಿಸಿದೆ ಎಂದು ಅವರು ಹೇಳಿದ್ದಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H